ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ–18 ಸಂಚಿಕೆ–8 ಪುಟಗಳು–10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಹಾಸಭೆ–ನೂತನ ಆಡಳಿತ ಮಂಡಳಿಯ ಆಯ್ಕೆ






ತಾ12–08–2018ರ ರವಿವಾರ ಶ್ರೀ ಶಾರದಾ ಮಂಟಪದಲ್ಲಿ ಸಂಘದ ವಾರ್ಷಿಕ ಮಹಾಸಭೆಯು ಜರಗಿತು. ಪ್ರಸಕ್ತ ಆಡಳಿತ ಮಂಡಳಿಯು ಮೂರು ವರ್ಷಗಳನ್ನು ಪೂರೈಸಿದ್ದುದರಿಂದ ನೂತನ ಆಡಳಿತ ಮಂಡಳಿಯನ್ನು ಆರಿಸುವ ಕಾರ್ಯವೂ ವಿಷಯು ಸೂಚಿಯುಲ್ಲಿತ್ತು. ಶ್ರೀಮತಿ ಜಯಲಕ್ಷ್ಮೀ ಎಮ್. ರಾವ್‌ರವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವೈ ಭುವನೇಂದ್ರ ರಾಯರು ಸಭಾಸದರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಗಳಾದ ಶ್ರೀ ಕೆ. ಸುರೇಶ ರಾಯರು ಮಹಾಸಭೆಯ ನೋಟೀಸನ್ನು ಓದಿ ಹೇಳಿದರು ಹಾಗೂ ಹಿಂದಿನ ವರ್ಷದ ಮಹಾಸಭೆಯ ವರದಿ, 2017–18ರ ಸಾಲಿನ ಸಂಘದ ಚಟುವಟಿಕೆಗಳ ವಾರ್ಷಿಕ ವರದಿ ಮಂಡಿಸಿ ಸರ್ವಾನುಮತದ ಅಂಗೀಕಾರ ಪಡೆದರು. ಕೋಶಾಧಿಕಾರಿಗಳಾದ ಶ್ರೀ ಕೆ.ಸುಧಾಕರ ರಾಯರು 2017–2018ರ ಸಾಲಿನ ಪರಿಶೋಧಿತ ವಾರ್ಷಿಕ ಲೆಕ್ಕ ಪತ್ರ, 2018–19ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಡಿಸಿ ಅಂಗೀಕಾರ ಪಡೆದರು. ಸದಸ್ಯರ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ನೀಡಲಾಯಿತು. ಅಧ್ಯಕ್ಷರು ಈ ಮೂರು ವರ್ಷಗಳಲ್ಲಿ ಸದಸ್ಯರು ತಮಗೆ ನೀಡಿದ ಸಹಕಾರಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಶ್ರೀ ಕೆ. ಸುರೇಶ್ ರಾವ್ ಕುತ್ಪಾಡಿ ಇವರು ಧನ್ಯವಾದವಿತ್ತರು. ನಂತರ ಸಂಘದ ನೂತನ ನಿಯಮಾವಳಿಯ ಪ್ರಕಾರ ಪಾರದರ್ಶಕವಾದ ಚುನಾವಣೆಯ ಮೂಲಕ 27 ಜನ ನಿರ್ದೇಶಕರುಗಳಿರುವ ನೂತನ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಶ್ರೀ ಕರಂಬಳ್ಳಿ ವೆಂಕಟರಾಯರು ಚುನಾವಣಾಧಿಕಾರಿಗಳಾಗಿ ಚುನಾವಣೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಭೋಜನದ ನಂತರ ನೂತನ ಆಡಳಿತ ಮಂಡಳಿಯ ಪ್ರಥಮ ಸಭೆಯಲ್ಲಿ 2018–2021ನೇ ಸಾಲಿನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.



2018–2021ನೇ ಸಾಲಿನ ಆಡಳಿತ ಮಂಡಳಿಯ ಪ್ರಥಮ ಸಭೆ

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

**2018–2021ನೇ ಸಾಲಿನ ನೂತನ ಆಡಳಿತ ಮಂಡಳಿಯ ಸದಸ್ಯರು**

ಅಧ್ಯಕ್ಷರು : ಶ್ರೀ ಕೆ. ಮಂಜುನಾಥ ಹೆಬ್ಬಾರ್, ಉಡುಪಿ

ಕಾರ್ಯದರ್ಶಿ :
ಶ್ರೀ ಯು.ಅರವಿಂದ ಕುಮಾರ್, ಕುಂಜಿಬೆಟ್ಟು

ಕೋಶಾಧಿಕಾರಿ :
ಶ್ರೀ ಬಿ.ಜಯರಾಮ ರಾವ್, ಉಡುಪಿ

ಉಪಾಧ್ಯಕ್ಷರು :
ಶ್ರೀ ಬಿ.ಕೃಷ್ಣಮೂರ್ತಿ ರಾವ್, ಅಂಬಲ್ಪಾಡಿ
ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ

ಜೊತೆ ಕಾರ್ಯದರ್ಶಿ :
ಶ್ರೀ ಐ.ಕೆ. ಜಯಚಂದ್ರ ರಾವ್, ಕುಂಜಿಬೆಟ್ಟು
ಶ್ರೀ ಪಿ.ಪ್ರಭಾಕರ ಭಂಡಿ, ಪೆರ್ಡೂರು

ನಿರ್ದೇಶಕರು :

| | |
|---|---|
| ಶ್ರೀಮತಿ ರಜನಿ ಕೆ.ಹೆಬ್ಬಾರ್, ಉಡುಪಿ | ಶ್ರೀಮತಿ ಪೂರ್ಣಿಮಾ ಪಿ.ರಾವ್, ಉಡುಪಿ |
| ಶ್ರೀಮತಿ ಜಯಲಕ್ಷ್ಮಿ ಎಂ.ರಾವ್, ಉಡುಪಿ | ಶ್ರೀ ಕೃಷ್ಣಕುಮಾರ ರಾವ್ ಮಟ್ಟು, ಕಟಪಾಡಿ |
| ಶ್ರೀ ಕೃಷ್ಣಮೂರ್ತಿ, ಬ್ರಹ್ಮಾವರ | ಶ್ರೀ ಮಧುಸೂದನ ರಾವ್, ಕುಂಜಾರುಗಿರಿ |
| ಶ್ರೀ ಎ.ಭಾಗ್ಯಚಂದ್ರ ರಾವ್, ಅಲೆವೂರು | ಶ್ರೀ ಬಿ. ಹರಿಶ್ಚಂದ್ರ ರಾವ್, ಮಣಿಪಾಲ |
| ಶ್ರೀ ಎಚ್. ಮಲ್ಲಿಕಾರ್ಜುನ ರಾವ್, ಕಾಪು | ಶ್ರೀ ಸಂತೋಷ್ ರಾವ್, ಚಿಟ್ಪಾಡಿ |
| ಶ್ರೀ ವೈ. ವಿಠ್ಠಲ ರಾವ್, ಚಿಟ್ಪಾಡಿ | ಶ್ರೀ ಎಂ. ಅಶೋಕ್ ರಾವ್, ಕಟ್ಪಾಡಿ |
| ಶ್ರೀ ಕೆ. ವೇಣುಗೋಪಾಲರಾವ್, ಅಂಬಲ್ಪಾಡಿ | ಶ್ರೀ ಟಿ. ಜಗದೀಶ ರಾವ್, ನಿಟ್ಟೂರು |
| ಶ್ರೀ ಸುರೇಶ ಶ್ಯಾನುಭಾಗ್, ಕುಂಜಿಬೆಟ್ಟು | ಶ್ರೀ ಸಿ. ದಿವಾಕರ ರಾವ್, ಚೊಕ್ಕಾಡಿ |
| ಶ್ರೀ ಕೆ. ಚಂದ್ರಶೇಖರ ರಾವ್, ಮಣಿಪಾಲ | ಶ್ರೀ ಟಿ. ಸುರೇಶ ರಾವ್, ಅಂಬಾಗಿಲು |
| ಶ್ರೀ ಯಂ. ಸಂತೋಷ್ ರಾವ್, ಚಿಟ್ಪಾಡಿ | ಶ್ರೀ ಕೆ. ಸುರೇಶ ರಾವ್, ಕುತ್ಪಾಡಿ |

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.

**ಪ್ರಕಟಣೆ**

ಆತ್ಮೀಯ ಸಮಾಜ ಬಾಂಧವರೇ,

ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

**ವರಮಹಾಲಕ್ಷ್ಮೀ ವ್ರತ**

ತಾ.24–08–2018ನೇ ಶುಕ್ರವಾರ ಸಂಜೆ 5–00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

**ಋಗುಪಾಕರ್ಮ**

ತಾ.25–08–2018ನೇ ಶನಿವಾರ
ಸಮಯ : ಬೆಳಿಗ್ಗೆ 10–00ರಿಂದ ಅಪರಾಹ್ನ 12–15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

**ಹೂವಿನ ಪೂಜೆ**

(ಮಹಿಳಾ ವೇದಿಕೆಯ ವತಿಯಿಂದ)
ತಾ.07–09–2018ನೇ ಶುಕ್ರವಾರ ಸಮಯ : ಸಂಜೆ 5–00 ಗಂಟೆಗೆ

**ಶೃಂಗೇರಿಯಲ್ಲಿ ಗುರುಗಳ ಭೇಟಿ**

ತಾ.09–09–2018ನೇ ರವಿವಾರ

ಚಾತುರ್ಮಾಸ ನಿರತರಾಗಿರುವ ಗುರುಗಳ ಭೇಟಿಗೆ ತೆರಳಲು ಬೆಳಿಗ್ಗೆ 7–00 ಗಂಟೆಗೆ ಶ್ರೀಶಾರದಾ ಮಂಟಪದಲ್ಲಿ ವಾಹನದ ವ್ಯವಸ್ಥೆ ಮಾಡಲಾಗುತ್ತದೆ. ಆಸಕ್ತ ಸಮಾಜ ಬಾಂಧವರು ಮುಂಚಿತವಾಗಿ ಮೆನೇಜರ್(9448108920, 0820–2520754) ರವರಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ಅಂದಾಜು ಖರ್ಚು ರೂ.350/-

ಶ್ರೀ ಕೆ. ಸುರೇಶ್ ರಾವ್
ಕಾರ್ಯದರ್ಶಿ

ಶ್ರೀ ಕೆ. ಸುಧಾಕರ ರಾವ್
ಕೋಶಾಧಿಕಾರಿ

ಶ್ರೀ ವೈ. ಭುವನೇಂದ್ರ ರಾವ್
ಅಧ್ಯಕ್ಷರು

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

## ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಉಡುಪಿಯ ಶ್ರೀಸ್ಥಾನಿಕ ಬ್ರಾಹ್ಮಣ ಸಂಘವು ನಮ್ಮ ಸಮಾಜದ ಎರಡನೆಯ ಹಿರಿಯ ಸಂಘ. ಈ ಸಂಘಕ್ಕೆ ದೇಶ ವಿದೇಶಗಳಲ್ಲಿ ನೆಲೆಸಿರುವ ನಮ್ಮ ಸಮಾಜ ಬಾಂಧವರು ಸದಸ್ಯರಾಗಿದ್ದಾರೆ. ಆದರೆ ಪ್ರಸಕ್ತ ಸನ್ನಿವೇಶದಲ್ಲಿ ಸಂಘದ ಚಟುವಟಿಕೆಗಳಲ್ಲಿ ದೂರದೂರಿನ ಸದಸ್ಯರು ಸಕ್ರಿಯವಾಗಿ ಭಾಗಿಗಳಾಗಲು ಸಾಧ್ಯವಾಗದೆ ಸಂಘದ ಚಟುವಟಿಕೆಗಳು ಉಡುಪಿಯ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗುತ್ತಿದೆ. ಮಾತ್ರವಲ್ಲದೆ ದಿನಕಳೆದಂತೆ ಈ ಚಟುವಟಿಕೆಗಳು ಕೇವಲ ಉಡುಪಿ ನಗರದ ವರಿಗೆ ಮಾತ್ರ ಸೀಮಿತವಾಗುತ್ತದೆಯೋ ಎಂಬಂತಹ ಸೂಚನೆಗಳೂ ಗೋಚರಿಸುತ್ತಿವೆ. ಆದುದರಿಂದ ಪ್ರಸಕ್ತ ಆಡಳಿತಮಂಡಳಿಯು ಉಡುಪಿ ತಾಲೂಕಿನ ಗ್ರಾಮೀಣ ಪ್ರದೇಶದ ಸಮಾಜಬಾಂಧವರಿಗೂ ನಮ್ಮ ಸಂಘದ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಮೂಡಿಸಿ ಅವರನ್ನೂ ಈ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿ ಸಂಘದ ವ್ಯಾಪ್ತಿಯನ್ನು ಉಳಿಸಿಕೊಳ್ಳಬೇಕೆಂದು, ಈ ವರ್ಷದಿಂದ ಉಡುಪಿ ಪರಿಸರದಲ್ಲಿ ನಮ್ಮವರ ಸಾಂದ್ರತೆ ಹೆಚ್ಚಾಗಿರುವ ಐದು ಪ್ರದೇಶಗಳನ್ನು ಗುರುತಿಸಿ ಆ ಪ್ರದೇಶಗಳಿಗೆ ಒಂದೊಂದು ನಿರ್ದೇಶಕನ ಸ್ಥಾನವನ್ನು ಮೀಸಲಾಗಿಟ್ಟಿದೆ. ಹೀಗೆ ಈ ಪ್ರದೇಶಗಳನ್ನು ಪ್ರತಿನಿಧಿಸುತ್ತಿರುವ ನಿರ್ದೇಶಕರಿಗೆ ಈ ಪ್ರದೇಶದ ಸಮಾಜ ಬಾಂಧವರನ್ನು ಸಂಘಟಿಸಿ ಸಂಘದ ಚುಟುವಟಿಕೆಗಳಲ್ಲಿ ತೊಡಗುವಂತೆ ಮಾಡುವ ಗುರುತರವಾದ ಜವಾಬ್ದಾರಿಯಿದೆ. ಸಂಘಟನೆಗೆ ಸಹಾಯವಾಗಲೆಂದು ನಮ್ಮವರ ವಿಳಾಸಪುಸ್ತಕವನ್ನು ಮೊಬೈಲ್ ಸಂಖ್ಯೆ ಹಾಗೂ ಮಿಂಚಂಚೆ ವಿಳಾಸ ಸಹಿತ ಸಂಪಾದಿಸಿದ್ದೇವೆ. ವಾಟ್ಸಾಪ್ ಗ್ರೂಪ್‌ಗಳ ಮುಖಾಂತರ ಈ ಮೊಬೈಲ್ ಯುಗದಲ್ಲಿ ಸದಸ್ಯರನ್ನು ಸಂಘಟಿಸುವುದು ಕಷ್ಟವೇನಲ್ಲ. ಹಾಗೆಯೇ ಸಂಘವು ಮಹಿಳೆಯರಿಗಾಗಿಯೂ ಮೂರು ನಿರ್ದೇಶಕರ ಸ್ಥಾನಗಳನ್ನು ಮೀಸಲಾಗಿರಿಸಿದೆ. ಮಹಿಳೆಯರನ್ನು ನಮ್ಮ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಅವರೊಂದಿಗೆ ಅವರ ಮಕ್ಕಳು ಹಾಗೂ ಕುಟುಂಬದವರೂ ಅವರ ಹಿಂದೆಯೇ ಬರುತ್ತಾರೆನ್ನುವುದು ನಮ್ಮ ಲೆಕ್ಕಾಚಾರ. ಹೀಗೆ ನಮ್ಮ ಲೆಕ್ಕಾಚಾರ ಸರಿಯಾಗಿ ಕೆಲಸ ಮಾಡಿದರೆ ಮುಂದಿನ ದಿನಗಳಲ್ಲಿ ಸಂಘದ ಚಟುವಟಿಕೆಗಳಲ್ಲಿ ಸಮಾಜ ಬಾಂಧವರು ದೊಡ್ಡಸಂಖ್ಯೆಯಲ್ಲಿ ಭಾಗವಹಿಸುವುದರಲ್ಲಿ ಸಂದೇಹವಿಲ್ಲ .

ನಮ್ಮ ಸಂಘಕ್ಕೆ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪವು ಕೇಂದ್ರ ಸ್ಥಾನ. ಇಲ್ಲಿ ಪ್ರತಿ ತಿಂಗಳೂ ಒಂದಲ್ಲ ಒಂದು ಚಟುವಟಿಕೆ ಇದ್ದೇ ಇದೆ. ಈ ಎಲ್ಲಾ ಚಟುವಟಿಕೆಗಳಲ್ಲಿ ಪ್ರಮುಖ ಸ್ಥಾನ ಶ್ರೀ ಶಾರದಾ ಪತ್ರಿಕೆಗೆ. ಪ್ರತೀ ತಿಂಗಳೂ ತಾ.15ರಂದು ಪ್ರಕಟವಾಗುವ ಈ ಪತ್ರಿಕೆಯು ಸಂಘದ ಮುಂದಿನ ತಿಂಗಳ ಕಾರ್ಯಕ್ರಮದ ಬಗ್ಗೆ ಮಾಹಿತಿ ಹಾಗೂ ಈ ತಿಂಗಳು ನಡೆದ ಕಾರ್ಯಕ್ರಮದ ವರದಿ ನೀಡುವ ಮೂಲಕ ಸಂಘದ ಮುಖವಾಣಿಯಾಗಿದೆ. ಸಂಘವು ನಡೆಸುತ್ತಿರುವ ವಿದ್ಯಾರ್ಥಿ ವೇತನ, ವೈದ್ಯಕೀಯ ಸಹಾಯದಂತಹಾ ಸೇವಾ ಕಾರ್ಯಗಳು ನಮ್ಮ ಸಮಾಜಬಾಂಧವರನ್ನು ಸಕಾಲದಲ್ಲಿ ತಲುಪಲು ಇದುವೇ ಸಂಪರ್ಕ ಸೇತು. ಮಾಡಿದ ಕಾರ್ಯಗಳಿಗೆ ಜನರ ಮೆಚ್ಚುಗೆ ದೊರಕಲು ಇದು ನೀಡಿದ ಪ್ರಚಾರವೇ ಕಾರಣ. ಸಂಘದ ಮುಖವಾಣಿಯು ಕೆಲಸದೊಂದಿಗೆ ನಮ್ಮ ಸಮಾಜದ ಇತರ ಸಂಘಗಳ ವರದಿಯನ್ನು ಹಾಗೂ ಕಾರ್ಯಕ್ರಮಗಳ ಪ್ರಕಟಣೆಯನ್ನೂ ಪ್ರಕಟಿಸುವುದರ ಮೂಲಕ ಇತರ ಸಂಘಗಳೊಂದಿಗೆ ನಮ್ಮ ಸಂಘದ ಬಾಂಧವ್ಯವನ್ನೂ ಇದು ಬೆಳೆಸುತ್ತಿದೆ. ಹಾಗೆಯೇ ನಮ್ಮ ಸಮಾಜ ಬಾಂಧವರ ಬರಹಗಳನ್ನು ಪ್ರಕಟಿಸಿ, ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ, ಅವರ ಕುಟುಂಬದ ಅಥವಾ ವೈಯುಕ್ತಿಕ ಸಂತೋಷದ ಅಥವಾ ದು:ಖದ ಕ್ಷಣಗಳನ್ನು ಹಂಚಿಕೊಳ್ಳುವುದರ ಮೂಲಕ ಈ ಪತ್ರಿಕೆಯು ಸಮಾಜ ಬಾಂಧವರ ಜೀವನದ ಪ್ರತಿಯೊಂದು ಪ್ರಮುಖ ಗಳಿಗೆಗಳಲ್ಲಿಯೂ ಪಾಲುದಾರ ನಾಗುತ್ತಿದೆ. ಇಂತಹಾ ಒಂದು ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡುವ ಅಪೂರ್ವ ಅನುಭವ ಕಳೆದ ಮೂರು ವರ್ಷಗಳಿಂದ ನನ್ನದಾಗಿದೆ. ಒಂದು ಸಮುದಾಯಕ್ಕೆ ಸೀಮಿತವಾದ ಪತ್ರಿಕೆಯೆಂಬ ಚೌಕಟ್ಟಿನೊಳಗೆ ಕೆಲಸಮಾಡುತ್ತಾ, ಸಂಪಾದಕ ಮಂಡಳಿಯ ಸಹಸದಸ್ಯರ ಅನುಭವಗಳ ಸಂಪೂರ್ಣ ಲಾಭವನ್ನು ಪಡೆಯುತ್ತಾ, ಹೊಸ ಅಂಕಣಗಳನ್ನು ಆರಂಭಿಸಿ ಈ ಪತ್ರಿಕೆಯನ್ನು ಆಕರ್ಷಕವಾಗಿಸಿ ನಮ್ಮ ಸಮಾಜದ ವಿವಿಧ ವಯೋಮಾನದವರನ್ನು ತಲುಪುವ ಪ್ರಯತ್ನವನ್ನು ಮಾಡಿದ್ದೇವೆ. ಸಮಾಜಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಕೆದಕಿ ಅದಕ್ಕೊಂದು ಉತ್ತರವನ್ನು ಒಮ್ಮತದಿಂದ ಪಡೆಯುವ ಪ್ರಯತ್ನವನ್ನು ಮಾಡಿದ್ದೇವೆ. ಹೀಗೆ ಕಳೆದ ಮೂರು ವರ್ಷಗಳಲ್ಲಿ ಏಕತಾನತೆಯನ್ನು ಹಿಮ್ಮೆಟ್ಟಿಸಿ ಪತ್ರಿಕೆಯನ್ನು ಅದಷ್ಟು ವೈವಿಧ್ಯ ಪೂರ್ಣವನ್ನಾಗಿಸುವ ಪ್ರಾಮಾಣಿಕ ಪ್ರಯತ್ನ ವನ್ನು ನಾವು ಮಾಡಿದ್ದೇವೆ. ನಮ್ಮ ಈ ಪ್ರಯತ್ನಕ್ಕೆ ಸಹಕಾರವನ್ನಿತ್ತ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಗೆ ನಮ್ಮ ಧನ್ಯವಾದಗಳು. ಅಂತೆಯೇ ಈ ಪತ್ರಿಕೆಯ ಎಲ್ಲಾ ಬರಹಗಳಿಗೆ ಸಕಾರಾತ್ಮಕವಾಗಿ ಪ್ರತಿಕ್ರಯಿಸಿ ನಮ್ಮ ಉತ್ಸಾಹ ಇಮ್ಮಡಿ ಯಾಗುವಂತೆ ಪ್ರಚೋದಿಸಿದ ನಿಮ್ಮೆಲ್ಲರಿಗೂ ಸಂಪಾದಕ ಮಂಡಳಿಯಿಂದ ಅನಂತಾನಂತ ಕೃತಜ್ಞತೆಗಳು. ಹಾಗೆಯೆ ಜಾಹೀರಾತುಗಳನ್ನು ನೀಡಿ ಪತ್ರಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಿದ ಜಾಹೀರಾತುದಾರರಿಗೂ ನಮ್ಮ ಧನ್ಯವಾದಗಳು. ಮುಂದಿನ ತಿಂಗಳಿಂದ ಈ ಪತ್ರಿಕೆಯು ಸಂಪಾದಕತನವನ್ನು ವಹಿಸಿಕೊಳ್ಳಲಿರುವ ನೂತನ ತಂಡವು ಹೊಸ ಹೊಸ ವಿಚಾರಗಳೊಂದಿಗೆ, ಹುಮ್ಮಸ್ಸಿನಿಂದ ಕೆಲಸ ಮಾಡಿ ಈ ಪತ್ರಿಕೆಯು ಇನ್ನಷ್ಟು ಆಕರ್ಷಕವಾಗಿ ಮೂಡಿಬರುವಲ್ಲಿ ಸಫಲರಾಗಲಿ ಎಂದು ಶುಭ ಹಾರೈಸುತ್ತೇವೆ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

**ನಮ್ಮೆಲ್ಲ ಓದುಗರಿಗೆ ಶ್ರೀಕೃಷ್ಣ ಜನ್ಮಾಷ್ಟಮಿ, ಗೌರೀತೃತೀಯಾ ಹಾಗೂ ಗಣೇಶ ಚತುರ್ಥಿ ಹಬ್ಬಗಳ ಶುಭಾಶಯಗಳು**

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-35

## ನೆಟ್ಲ ಶ್ರೀ ವೆಂಕಟರಮಣ ಮಠ ನೆಟ್ಲ, ದ.ಕ

ಮಂಗಳೂರು ಉಪ್ಪಿನಂಗಡಿ ಹೆದ್ದಾರಿಯಲ್ಲಿ ಕಲ್ಲಡ್ಕ ಎಂಬಲ್ಲಿ ಹೆದ್ದಾರಿಯ ಬಲಬದಿಗೆ ವಿಟ್ಲ ಎಂಬಲ್ಲಿಗೆ ಹೋಗುವ ರಸ್ತೆ ಸಿಗುತ್ತದೆ ಈ ರಸ್ತೆಯಲ್ಲಿ ಸುಮಾರು ಎರಡು ಕಿ.ಮಿ. ಕ್ರಮಿಸಿದಾಗ ಪುನಃ ಬಲಬದಿಗೆ ಸಾಲೆತ್ತೂರು ಎಂಬಲ್ಲಿಗೆ ಹೋಗುವ ರಸ್ತೆ ಸಿಗುತ್ತದೆ . ಈ ರಸ್ತೆಯಲ್ಲಿ ಸ್ವಲ್ಪದೂರದಲ್ಲಿ ಪ್ರಸಿದ್ಧ ನಿಟಿಲಾಕ್ಷ ಸದಾಶಿವ ದೇವಸ್ಥಾನವಿದೆ. ಈ ದೇವಸ್ಥಾನದ ಹತ್ತಿರದಲ್ಲಿ ಇರುವುದೇ ಶ್ರೀ ವೆಂಕಟರಮಣ ಮಠ.

ಇದು ಸುಮಾರು ನೂರೈವತ್ತು ವರ್ಷಗಳ ಹಿಂದೆ ಬ್ರಾಹ್ಮಣರು ವೇದಾಧ್ಯಯನಗೈಯಲು ಆಗಿನ ಕಾಲದ ಅರಸರು ಉಂಬಳಿಯಿತ್ತು ಸ್ಥಾಪಿಸದ ಮಠ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಈಗ ತಿಳಿದಿರುವ ಪ್ರಕಾರ ನೆಟ್ಲಮುಂಡ ಶಂಕರನಾರಾಯಣ ರಾವ್(ಅಣ್ಣಪ್ಪಯ್ಯ ಎಂದೇ ಪ್ರಸಿದ್ಧರು) ರವರ ಕಾಲದಲ್ಲಿ ಉನ್ನತಿಯಲ್ಲಿದ್ದ ಮಠವಾಗಿತ್ತು. ಅನಂತರ ಅವರ ಕುಟುಂಬಸ್ಥರೇ ಈ ಮಠದ ದಿನನಿತ್ಯದ ಆಗುಹೋಗುಗಳನ್ನು ಹಾಗೂ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಈ ಮಠದಲ್ಲಿ ಮಠ ಸಂಪ್ರದಾಯದಂತೆ ಕಟ್ಟಿದ ಮುರಕಲ್ಲಿನ ಗರ್ಭಗುಡಿ, ಹಂಚಿನ ಮಾಡು, ಎದುರು ತೀರ್ಥಮಂಟಪ ಹಾಗೂ ಸುತ್ತುಪೌಳಿ ಇದೆ. ಮಠಕ್ಕೆ ಸ್ವಂತದ್ದಾದ 18 ಸೆಂಟ್ಸ್ ಸ್ಥಳ ಇದೆ. ಮೊದಲು ವಿವಾಹ ಉಪನಯನ ಇತ್ಯಾದಿ ಕಾರ್ಯಕ್ರಮಗಳು ಜರಗುತ್ತಿದ್ದುದರಿಂದ ಪಾಕಶಾಲೆ ಇತ್ಯಾದಿ ಅನುಕೂಲತೆಗಳಿವೆ.

ಶ್ರೀ ವೆಂಕಟರಮಣ ದೇವರು ಇಲ್ಲಿಯ ಪ್ರಧಾನ ದೇವರು. ಪಂಚಲೋಹದ ಅಂಗೈಗಾತ್ರದ ವಿಗ್ರಹ. ಜೊತೆಗೆ ಶ್ರೀಲಕ್ಷ್ಮಿ, ಶ್ರೀದೇವಿ ಭೂದೇವಿ, ದುರ್ಗಾಪರಮೇಶ್ವರಿಯವರೂ ಪೂಜೆಗೊಳ್ಳುತ್ತಿದ್ದಾರೆ. ಸದ್ಯಕ್ಕೆ ನಿತ್ಯಪೂಜೆ ಹಾಗೂ ಭಕ್ತರು ಸಲ್ಲಿಸುವ ಇತರ ವಿಶೇಷ ಪೂಜೆಗಾಗಿ ನಮ್ಮವರೇ ಅರ್ಚಕರಾಗಿ ನೇಮಕವಾಗಿದ್ದಾರೆ. ಚೌತಿ, ನವರಾತ್ರಿ, ದೀಪಾವಳಿಯನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

ಪ್ರಸಕ್ತ ಶ್ರೀ ನೆಟ್ಲಮುಂಡ ವಿಜಯಕುಮಾರ್ ರವರ ನೇತೃತ್ವದ ವ್ಯವಸ್ಥಾಪನಾ ಮಂಡಳಿಯು ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಅವರ ಸಹೋದರ ನೆಟ್ಲಮುಂಡ ಶ್ರೀ ಸುರೇಶ ರಾಯರು ಸಕ್ರಿಯರಾಗಿ ನಿತ್ಯದ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದಾರೆ. ಮಠವು ಮುಜರಾಯಿ ಇಲಾಖೆಗೆ ಸೇರಿದ್ದು ಸರಕಾರದಿಂದ ತಸ್ತಿೀಕು ದೊರಕುತ್ತಿದೆ. ಸದ್ಯದಲ್ಲೆ ಮಠವನ್ನು ಜೀರ್ಣೋದ್ಧಾರಗೊಳಿಸುವ ಉದ್ದೇಶವೂ ವ್ಯವಸ್ಥಾಪನಾ ಮಂಡಳಿಗಿದೆ

ಹೆಚ್ಚಿನ ಮಾಹಿತಿಗಾಗಿ ಶ್ರೀ ನೆಟ್ಲಮುಂಡ ವಿಷ್ಣುಕುಮಾರ್‌ರನ್ನು 9632659360ದಲ್ಲಿ ಸಂಪರ್ಕಿಸಬಹುದು.

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯುಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging



# ನಿರ್ಗಮನ ಅಧ್ಯಕ್ಷರ ಮನದಾಳದಿಂದ...

ಅನಾದಿಕಾಲದಿಂದಲೂ ಭಾರತ ದೇಶ ತನ್ನದೇ ಆದ ವಿಶಿಷ್ಟ ಹಾಗೂ ಶ್ರೇಷ್ಠ ಧಾರ್ಮಿಕ ಹಿನ್ನೆಲೆ'ಯಲ್ಲಿ ಸಮಾಜದ ವಿಭಿನ್ನ ಸ್ತರದ ವಿವಿಧ ಜಾತಿಪಂಥಗಳ ಜನರನ್ನು ಒಗ್ಗೂಡಿಸಿ ಪ್ರಪಂಚದಲ್ಲಿಯೇ ತನ್ನ ತನವನ್ನು ನಿರಂತರವಾಗಿ ಉಳಿಸಿಕೊಂಡು ವಿವಿಧತೆಯಲ್ಲಿ ಏಕತೆಯನ್ನು ಪ್ರದರ್ಶಿಸಿಕೊಂಡು ಬಂದಿದೆ. ವೈದಿಕ ಪರಂಪರೆ ಇದರ ಜೀವಾಳವಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಬ್ರಾಹ್ಮಣರ ಕೊಡುಗೆಯು ಅಪಾರವಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಸಾವಿರಾರು ವರ್ಷಗಳಿಂದ ನೆಲೆಸಿಕೊಂಡು ಬಂದು ಈ ಮಣ್ಣಿನ ಆಚಾರ ವಿಚಾರ, ಧಾರ್ಮಿಕತೆ, ಪರಂಪರೆ, ಕಲೆ, ಸಾಹಿತ್ಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ವಿಶಿಷ್ಟ ರೀತಿಯ ಕೊಡುಗೆಯನ್ನು ನೀಡುತ್ತಾ ಬಂದಿರುವ ಮತ್ತು ಸಮಾಜದಲ್ಲಿ ಶ್ರೇಷ್ಠ ಬ್ರಾಹ್ಮಣರಾಗಿ, ರಾಜಮಹಾರಾಜರ ದೀವಾನರಾಗಿ, ರಾಜಾಶ್ರಯದಲ್ಲಿ ಆಡಳಿತ ವಿವಿಧ ಹುದ್ದೆಗಳಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ನಿರ್ವಹಿಸಿ ಸಮಾಜವನ್ನು ಒಗ್ಗೂಡಿಸಿ ಮುನ್ನಡೆಸಿದ ಹಿರಿಮೆ ಇಲ್ಲಿನ ಮೂಲ ಬ್ರಾಹ್ಮಣರಾದ "ಸ್ಥಾನಿಕ" ಬ್ರಾಹ್ಮಣರದು.

ಸುಮಾರು 52 ವರ್ಷಗಳ ಹಿಂದೆ ಉಡುಪಿಯಲ್ಲಿ ನಮ್ಮ ಸಮಾಜದ ಹಲವಾರು ಚಿಂತಕರು ಹಾಗೂ ಧೀಮಂತ ನಾಯಕರ ಶ್ರಮದ ಫಲವಾಗಿ "ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ" ಎಂಬ ಸಂಸ್ಥೆಯು ಉದಯಿಸಿತು. 1966ರಲ್ಲಿ ಈ ಸಂಸ್ಥೆ ರಿಜಿಸ್ಟರ್ ಸಂಸ್ಥೆಯಾಗಿ ನೋಂದಣಿಗೊಂಡಿತು. ಕಾಲಾಂತರದಲ್ಲಿ ನಮ್ಮ ಸಮಾಜದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲು "ಶ್ರೀಶಾರದಾ ಮಂಟಪ", ಶೃಂಗೇರಿ ಶ್ರೀ ಶಾರದೆಯ ಸಾನಿಧ್ಯವಿರುವ ಶ್ರೀ ಶಾರದಾ ದೇವಸ್ಥಾನ, ಧಾರ್ಮಿಕ ಕಾರ್ಯಕ್ರಮ ನಡೆಸಲು "ಶ್ರೀ ಜ್ಞಾನಮಂದಿರ" ಇತ್ಯಾದಿ ಸೌಲಭ್ಯಗಳನ್ನು ಮಾಡಿಕೊಳ್ಳಲಾಯಿತು. ನಮ್ಮ ಸಮಾಜದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ, ಡಾ| ದಯಾನಂದ ರಾವ್ ಟ್ರಸ್ಟ್ ವತಿಯಿಂದ ಸಾಲ ವಿದ್ಯಾರ್ಥಿ ವೇತನ, ಉದಯಚಂದ್ರ ಪ್ರತಿಭಾ ಪುರಸ್ಕಾರ, ಅಂಬಲ್ಪಾಡಿ ಕೃಷ್ಣ ರಾವ್ ಪ್ರತಿಭಾ ಪುರಸ್ಕಾರ, ಚಂಡಿಕಾಹೋಮ, ಸಾಮೂಹಿಕ ದುರ್ಗಾನಮಸ್ಕಾರ ಪೂಜೆ, ನವರಾತ್ರಿ ಪೂಜೆಗಳು, ಕಿರುನವರಾತ್ರಿ ಪೂಜೆಗಳು, ವರಮಹಾಲಕ್ಷ್ಮೀ ಪೂಜೆ, ಹೂವಿನ ಪೂಜೆ, ಸಾಮೂಹಿಕ ಉಪನಯನ, ಋಗುಪಾಕರ್ಮ, ನಾಗರ ಪಂಚಮಿ, ಶಂಕರ ಜಯಂತಿ, ಶೃಂಗೇರಿ ಗುರುಗಳ ಭೇಟಿ, ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ, ಮಹಿಳೆಯರು, ಮಕ್ಕಳು ಹಾಗೂ ಹಿರಿಯ ನಾಗರಿಕರಿಗಾಗಿ ಕ್ರೀಡೋತ್ಸವ, ವಾರ್ಷಿಕ ಮಹಾಸಭೆ, ಪ್ರವಾಸ, ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ತರಬೇತಿ, ಮಹಾಶಿವರಾತ್ರಿ ಪೂಜೆ, ಪ್ರತಿಷ್ಠಾ ಮಹೋತ್ಸವಗಳನ್ನು ನಿಯಮಿತವಾಗಿ ವಿಜೃಂಭಣೆಯಿಂದ ನಡೆಸಿಕೊಂಡು ಬಂದಿರುವುದಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಸಾಂದರ್ಭಿಕವಾಗಿ ಒದಗಿ ಬಂದಿರುವ ಹಲವಾರು ಇತರ ಕಾರ್ಯಕ್ರಮಗಳನ್ನೂ ನಡೆಸಿಕೊಂಡು ಬಂದಿದ್ದೇವೆ. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳಾ ವೇದಿಕೆಯ ಸದಸ್ಯರಿಂದ ಹಾಗೂ ಭಕ್ತಾಧಿಗಳಿಂದ ಪ್ರತೀ ಮಂಗಳವಾರ ಸಂಜೆ ಸೌಂದರ್ಯಲಹರೀ ಪಾರಾಯಣ, ಶುಕ್ರವಾರ ಲಲಿತಾಸಹಸ್ರ ನಾಮ ಪಾರಾಯಣ ಹಾಗೂ ಭಜನೆ, ಆದಿತ್ಯವಾರ ಸ್ವಾಧ್ಯಾಯ ತಂಡದವರಿಂದ ಪಾರಾಯಣ, ತಿಂಗಳ ಸಂಕಷ್ಟಹರ ಚತುರ್ಥಿಯಂದು ಸಾಮೂಹಿಕ ಗಣಹೋಮ, ಮೂಲಾ ನಕ್ಷತ್ರದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ, ಪಂಚಮಿಗಳಂದು ನಾಗದೇವರಿಗೆ ತನುಸೇವೆ ಮತ್ತು ವಿಶೇಷ ದಿನಗಳಲ್ಲಿ ಪಾರಾಯಣ, ಭಜನೆ ಸಹಿತ ಶ್ರೀದೇವಿಗೆ ಅಲಂಕಾರ ಪೂಜೆಗಳು ನಡೆಯುತ್ತಿವೆ. ಶ್ರೀಶಾರದಾ ಮಂಟಪವು ಉಡುಪಿ ಪರಿಸರದಲ್ಲಿಯೇ ಉತ್ತಮ ಸೌಲಭ್ಯ ಹಾಗೂ ಸೇವೆಗಳನ್ನು ಒಳಗೊಂಡಿರುವ ಪ್ರಥಮ ಪ್ರಾಶಸ್ತ್ಯದ ಸಭಾಂಗಣವಾಗಿದೆ.

2015 ಜೂನ್ 21ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಆಯ್ಕೆಗೊಂಡ 27 ಸದಸ್ಯರ ಆಡಳಿತ ಮಂಡಳಿ ಮತ್ತು 7 ಮಂದಿ ಸದಸ್ಯರ ಸಲಹಾ ಸಮಿತಿ 3 ವರ್ಷಗಳ ಅವಧಿಯಲ್ಲಿ ಹಲವಾರು ಸುಧಾರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಮುಗಿಸಿದೆ. ಆಡಳಿತ ಮಂಡಳಿಯೊಂದಿಗೆ ಪುನರಾಚಿತ 8 ವೇದಿಕೆಗಳೂ ಸಮಾಂತರವಾಗಿ ಸಮಾಜಮುಖೀ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಸಮಗ್ರ ಉನ್ನತಿಗೆ ಕೊಡುಗೆ ನೀಡಿವೆ. ಯುವ ಮತ್ತು ಕ್ರೀಡಾ ವೇದಿಕೆ, ಮಹಿಳಾ ವೇದಿಕೆ, ದೇವಸ್ಥಾನ ವೇದಿಕೆ, ವೈದ್ಯಕೀಯ ವೇದಿಕೆ, ಕಲೆ ಮತ್ತು ಸಂಸ್ಕೃತಿ ವೇದಿಕೆ, ವಿದ್ಯಾರ್ಥಿ ವೇತನ ಶಿಕ್ಷಣ ಹಾಗೂ ತರಬೇತಿ ವೇದಿಕೆ, ಆಂತರಿಕ ಲೆಕ್ಕ ಪರಿಶೋಧನಾ ವೇದಿಕೆಗಳು ನಿರಂತರವಾಗಿ ಆಡಳಿತ ಮಂಡಳಿಯೊಂದಿಗೆ ಇದ್ದು ಆಡಳಿತ ಮಂಡಳಿ ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಿವೆ. ಅದೇ ರೀತಿ ತುರ್ತು ಸೇವಾ ಸಮಿತಿಯವರು ನಮ್ಮ ಸಮಾಜಬಾಂಧವರಿಗೆ ತುರ್ತು ನೆರವನ್ನು ನೀಡುತ್ತಾ ಬಂದಿದ್ದಾರೆ.

ಕಳೆದ ಮೂರು ವರುಷಗಳ ಅವಧಿಯಲ್ಲಿ ಹಲವಾರು ಪ್ರಗತಿಪರ ಕಾರ್ಯಗಳನ್ನು ಆಡಳಿತ ಮಂಡಳಿ ಮಾಡಿದೆ. ಶ್ರೀ ಶಾರದಾ ಮಂಟಪದ ಆನಂದರಾವ್ ಸಭಾಭವನ, ವಧೂವರರ ಕೊಠಡಿ, ಜ್ಞಾನ ಮಂದಿರಗಳ ನೆಲ ಹಾಗೂ ಗೋಡೆಗಳಿಗೆ ಟೈಲ್ಸ್ ಅಳವಡಿಕೆ, ವಧೂವರರ ಕೊಠಡಿಗಳಿಗೆ ವಾತಾನುಕೂಲಗಳ ಅಳವಡಿಕೆ, ಮಹಿಳೆಯರಿಗಾಗಿ ಹೊಸ ಶೌಚಾಲಯದ ಸೇರ್ಪಡೆ, ಜ್ಞಾನ ಮಂದಿರದ ಮಹಡಿಯ ಮಾಡಿಗೆ ಫಾಲ್ಸ್ ಸೀಲಿಂಗ್ ಅಳವಡಿಕೆ, ನಾಗಬನಕ್ಕೆ ಹೊಸ ಮಾಡು ಇತ್ಯಾದಿ ಹಲವಾರು ನವೀಕರಣ ಕೆಲಸಗಳನ್ನು ಮಾಡಲಾಗಿದೆ. ಕಳೆದ 27 ವರ್ಷಗಳಿಂದ ನಡೆಸುಕೊಂಡು ಬಂದಿರುವ "ಶ್ರೀಶಾರದಾ ಕ್ರಿಕೆಟ್ ಟ್ರೋಫಿ ಪಂದ್ಯಾಟ"ದ ರಜತ ಮಹೋತ್ಸವವನ್ನು ವಿಶೇಷ ರೀತಿಯಲ್ಲಿ ನಡೆಸಲಾಗಿದೆ. ಹಾಗೆಯೇ ಕಳೆದ ವರ್ಷ ನಮ್ಮ ಸಂಘದ ಸುವರ್ಣ ಮಹೋತ್ಸವ ಸಮಾರಂಭವನ್ನು ಅದ್ದೂರಿಯಾಗಿ ನಡೆಸಲಾಗಿದ್ದು ಆ ಸಂದರ್ಭ ದಲ್ಲಿ ಸ್ಮರಣ ಸಂಚಿಕೆ "ಸುವರ್ಣಸ್ಮೃತಿ" ಹಾಗೂ ಉಡುಪಿ ಸಮಾಜ ಬಾಂಧವರ ವಿಳಾಸ ಪುಸ್ತಕ "ಬಳಗ"ಗಳನ್ನು ಬಿಡುಗಡೆ ಮಾಡಲಾಯಿತು. ಮಹಿಳಾವೇದಿಕೆಯವರ ಅನುಕೂಲಕ್ಕಾಗಿ ನಮ್ಮ ಸಂಘದಿಂದ ಹಿಂದೆ ಮುದ್ರಣಗೊಂಡಿದ್ದ "ಉಪಾಸನಾ ಮಂಜರಿ" ಭಜನಾ ಪುಸ್ತಕವನ್ನು ಪರಿಷ್ಕರಿಸಿ ದಿನಾಂಕ 20-04-2018ರಂದು "ಉಪಾಸನಾ ಮಂಜರಿ-2" ಭಜನಾ ಪುಸ್ತಕವನ್ನು ಮುದ್ರಿಸಿ ಬಿಡುಗಡೆಗೊಳಿಸಲಾಯಿತು. ನಮ್ಮ ಸಮಾಜದ ಮುಖವಾಣಿಯಾಗಿರುವ "ಶ್ರೀ ಶಾರದಾ" ಪತ್ರಿಕೆ ಕಳೆದ ಮೂರು ವರ್ಷಗಳಿಂದ ಬಹುವರ್ಣದ ಪತ್ರಿಕೆಯಾಗಿ ಮಾರ್ಪಾಡುಗೊಂಡು ವೈಚಾರಿಕ ಹಾಗೂ ಧಾರ್ಮಿಕ ಲೇಖನಗಳೊಂದಿಗೆ ವೈವಿಧ್ಯಮಯವಾಗಿ ಬರುತ್ತಿದ್ದು ಓದುಗರ ಮನಸ್ಸನ್ನು ಗೆದ್ದಿದೆ.

ನಮ್ಮ ಆಡಳಿತಾವಧಿಯಲ್ಲಿ 35 ಆಡಳಿತ ಮಂಡಳಿ ಸಭೆ, 3 ಮಹಾಸಭೆ ಹಾಗೂ 2 ವಿಶೇಷ ಮಹಾಸಭೆಗಳನ್ನು ನಡೆಸಲಾಗಿದೆ. ನಮ್ಮ ಸಂಘದ ಮೂಲ ನಿಯಮಾವಳಿಗಳಿಗೆ ಕಳೆದ 50 ವರುಷಗಳಿಂದ ಹಲವಾರು ಸೇರ್ಪಡೆ ಹಾಗೂ ಮಾರ್ಪಾಡುಗಳನ್ನು ಮಾಡಲಾಗಿತ್ತು. ಇವೆಲ್ಲವುಗಳನ್ನು ಕ್ರೋಢೀಕರಿಸಿ ಬರೆಯುವ ನಿಟ್ಟಿನಲ್ಲಿ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಹಲವಾರು ಬಾರಿ ಸೇರಿ ಚರ್ಚಿಸಿ ರೂಪಿಸಿದ ನಿಯಮಾವಳಿ ಗಳನ್ನು ಆಡಳಿತ ಮಂಡಳಿಯಲ್ಲಿ ಎರಡೆರಡು ಬಾರಿ ಪರಿಶೀಲಿಸಿದ ನಂತರ ದಿನಾಂಕ 18.03.2018ರಂದು 1ನೇ ವಿಶೇಷ ಮಹಾಸಭೆಯಲ್ಲಿ ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕೃತ ನಿಯಮಾವಳಿಗಳು ಅಂಗೀಕಾರಗೊಂಡವು. ದಿನಾಂಕ 15.04.2018ರಂದು ಈ ಉದ್ದೇಶಕ್ಕಾಗಿ ಕರೆದ 2ನೇ ವಿಶೇಷ ಮಹಾಸಭೆಯಲ್ಲಿ ಅದು ಸರ್ವಾನುಮತದಿಂದ ಅನುಮೋದನೆಗೊಂಡಿತು. ನಮ್ಮ ಸಂಘದ ಪರಿಷ್ಕೃತ ನಿಯಮಾವಳಿಗಳು 07.07.2018ರಂದು ಜಿಲ್ಲಾ ಸಹಕಾರಿ ಸಂಘಗಳ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಗೊಂಡಿದೆ. ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ನಮ್ಮ ಆಡಳಿತಾವಧಿಯಲ್ಲಿ ಆಡಳಿತ ಮಂಡಳಿಯು ತೆಗೆದುಕೊಂಡ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದ ಕಾರ್ಯಕಾರಿ ಸಮಿತಿಯ ಸದಸ್ಯರು, ಆಡಳಿತ ಮಂಡಳಿಯ ಸದಸ್ಯರು, ಸಲಹಾ ಸಮಿತಿಯ ಸಲಹೆಗಾರರು, ಎಲ್ಲಾ ವೇದಿಕೆಗಳ ಅಧ್ಯಕ್ಷರು, ಸಂಚಾಲಕರು ಹಾಗೂ ಸದಸ್ಯರು, ಸಂಘದ ನಿಯಮಾವಳಿಗಳ ಪರಿಷ್ಕರಣಾ ಸಮಿತಿಯ ಸದಸ್ಯರು, ಲೆಕ್ಕಪರಿಶೋಧಕರಾದ ಶ್ರೀ ಕೆ. ಗಣೇಶ್ ಹೆಬ್ಬಾರ್‌ರವರು, ಚುನಾವಣಾಧಿಕಾರಿಯಾಗಿ ಸಹಕರಿಸಿದ ಶ್ರೀ ಕರಂಬಳ್ಳಿ ವೆಂಕಟ್ರಾವ್‌ರವರು, ತುರ್ತುಸೇವಾ ಸಮಿತಿಯ ಸದಸ್ಯರು, ಶ್ರೀ ಶಾರದಾ ಪತ್ರಿಕೆಯ ಸಂಪಾದಕರು ಹಾಗೂ ಸದಸ್ಯರು, ಸಂಘದ ಸದಸ್ಯರು, ಪೋಷಕರು, ದಾನಿಗಳು ಹಾಗೂ ನಾವು ನಮ್ಮ ಅಧಿಕಾರಾವಧಿಯಲ್ಲಿ ತೃಪ್ತಿಕರವಾಗಿ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ಸಮಾಜ ಎಲ್ಲಾ ಬಾಂಧವರಿಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ. ಮುಂದಕ್ಕೆ ಬರುವ ನೂತನ ಆಡಳಿತ ಮಂಡಳಿ ಇನ್ನೂ ಹೆಚ್ಚಿನ ಸೇವೆಯನ್ನು ನಮ್ಮ ಸಮಾಜಕ್ಕೆ ನೀಡಲಿ, ಶ್ರೀ ಶಾರದಾ ಮಾತೆ ಎಲ್ಲರಿಗೂ ಸನ್ಮಂಗಲ ವನ್ನುಂಟು ಮಾಡಲಿ ಎಂದು ಹಾರೈಸುತ್ತೇವೆ.

– ಶ್ರೀ ವೈ. ಭುವನೇಂದ್ರ ರಾವ್

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರ ರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

*With Best Complimemts From*
SRI M. SHAILESH RAO
B.E., Civil
Ph : 9448624324
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ನನ್ನ ಆರು ಕೃತಿಗಳು....

- ವೈ. ಮೋಹನ ರಾವ್

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಾದಂಬರಿ–ಮೂಕಜ್ಜಿಯ ಕನಸುಗಳು–ಈ ಕಾದಂಬರಿಯ ಮಹಾಲೇಖಕರಾದ ಡಾ.ಕೆ.ಶಿವರಾಮ ಕಾರಂತರು ತನ್ನ ಕೃತಿಯ 'ಮರು ಮುದ್ರಣಕ್ಕೆ ಮುನ್ನುಡಿ'ಯಲ್ಲಿ ಹೀಗೆ ಹೇಳುತ್ತಾರೆ: "ತನ್ನ ಬರಹವನ್ನು ಸಾಹಿತಿ ನಂಬಿ ಬದುಕುವ ಕಾಲ ಬಂದಿದೆ–ಎಂದು ಎಣಿಸಿದ ನನಗೆ, ಬಂದಿಲ್ಲ ಅನಿಸುತ್ತಿದೆ. ಪ್ರಾಯಶಃ ವಯಸ್ಸಾದ ಬರಹಗಾರರು ಕನ್ನಡ, ಕನ್ನಡ ಎಂದು ಬದುಕುವ ಕಾಲ ಒಬ್ಬಿಬ್ಬರ ಪಾಲಿಗೆ ಬಂದಿರಬಹುದು. ಬಹುಮಂದಿ ಸ್ವತಂತ್ರ ಲೇಖಕರ ಪಾಲಿಗೆ ಅದು ಬಂದಿಲ್ಲ". ಇದು ನಿಜವಾಗಿಯೂ ಸತ್ಯವೇ ಆಗಿದೆ.

ಆದ ಕಾರಣ ನಾನು 33 ವರ್ಷಗಳ ಶಿಕ್ಷಕ ಸೇವೆಯಲ್ಲಿ 'ಉದಯವಾಣಿ' ಮತ್ತು ಇತರ ಪತ್ರಿಕೆಗಳಲ್ಲಿ ಲೇಖನಗಳು, ಕಥೆಗಳು, ಚುಟುಕಗಳು, ಹಾಸ್ಯ ಲೇಖನಗಳನ್ನು ಬರೆದಿದ್ದೆ. ಆ ಅವಧಿಯಲ್ಲಿ ಆಕಾಶವಾಣಿಯಲ್ಲೂ ರೇಡಿಯೋ ಚಿಂತನಗಳಲ್ಲಿ ಭಾಗವಹಿಸಿದ್ದೆ. ಆದರೆ ಯಾವುದನ್ನೂ ಪುಸ್ತಕ ರೂಪದಲ್ಲಿ ತರಲಿಲ್ಲ. ಆದರೆ 2013ರಲ್ಲಿ 'ಕರ ಮುಗಿವೆ ಗುರುರಾಯ' ಕೃತಿಯನ್ನು ಬರೆದೆ. ಇದು ಶ್ರೀ ರಾಘವೇಂದ್ರ ಸ್ವಾಮಿಗಳ ಪವಾಡ ಕಥೆಗಳ ಸಂಕಲನ. ಆಗಿನ ಪರ್ಯಾಯ ಶ್ರೀ ವಾದಿರಾಜ ಮಠ, ಶ್ರೀ ಕೃಷ್ಣ ಮಠ ಉಡುಪಿ ಇದರ ಪೀಠಾಧಿಪತಿಗಳಾದ ಪೂಜ್ಯ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳವರು ಈ ಕೃತಿಯನ್ನು ಬಿಡುಗಡೆಗೊಳಿಸಿದರು. ಈ ಕೃತಿಯನ್ನು ಉಡುಪಿಯ ಕಡಗೋಲು ಶ್ರೀ ಕೃಷ್ಣನ ಚರಣಕಮಲಗಳಿಗೆ ಅರ್ಪಿಸಿದ್ದೆ. ಈ ಕೃತಿಯ 'ಹೊನ್ನುಡಿ'ಯನ್ನು ಶ್ರೀ ಕೆ. ಎ.ಕೆ ಭಟ್, ವಿಶ್ರಾಂತ ಪ್ರಾಂಶುಪಾಲರು ಇವರು ಬರೆದಿರುವರು. ಇವರು ಹೊನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: "ನೀನು ಮಾಡಿದ ಎಲ್ಲಾ ಕರ್ಮವನ್ನು ನನಗೆ ಅರ್ಪಿಸು ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದಂತೆ ಶ್ರೀಯುತರು 'ಕರಮುಗಿವೆ ಗುರುರಾಯ' ಎಂಬ ಕೃತಿಯನ್ನು ಶ್ರೀಕೃಷ್ಣನಿಗೆ ಅರ್ಪಣೆ ಮಾಡಿದ್ದಾರೆ. ಅದರಲ್ಲೂ ವಾದಿರಾಜರ ಪರಂಪರೆಯಲ್ಲಿ ಬಂದಿರುವ ಮಧ್ವಾಚಾರ್ಯರ ಪೂರ್ಣ ಸನ್ನಿಧಾನವಿರುವ ಪರ್ಯಾಯ ಶ್ರೀಗಳಾದ ಶ್ರೀ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರ ಮೂಲಕ ಅರ್ಪಿಸುವುದು ಶ್ರೀ ರಾಘವೇಂದ್ರ ಸ್ವಾಮಿಗಳ ಅತ್ಯಂತ ಪ್ರಸನ್ನತೆಗೆ ಅರ್ಹವಾದೀತು."

'ಎಂದೆಂದೂ ಮುಗಿಯದ ಕಥೆ'–ಇದು ಕಥಾ ಸಂಕಲನ. ಇದು ನನ್ನ ಎರಡನೆಯ ಕೃತಿ. ಈ ಕೃತಿಗೆ ಶುಭ ಸಂದೇಶವನ್ನು ತಿಳಿಸಿದವರು ನನ್ನ ಆತ್ಮೀಯ ಮಿತ್ರರಾದ ಶ್ರೀ ಕೆ.ವಿ.ಶ್ರೀನಿವಾಸ ರಾವ್. ಇವರು ಈ ಕೃತಿಯಲ್ಲಿ ಹೇಳುತ್ತಾರೆ. "ಸಾಹಿತ್ಯದಲ್ಲಿ ಲೇಖಕರಿಗಿರುವ ಅಭಿರುಚಿ, ಆಸಕ್ತಿ ತುಂಬಾ ಮೆಚ್ಚುವಂತದ್ದು. ಹಲವು ಪತ್ರಿಕೆಗಳಲ್ಲಿ ಅವರು ಬರೆದ ಕಥೆ, ಕವನಗಳು ಪ್ರಕಟವಾಗುತಿತ್ತು. ತುಳು ಭಾಷೆಯಲ್ಲಿ ಪ್ರಾವಿಣ್ಯ ಹೊಂದಿದ್ದು ಆ ಭಾಷೆಯಲ್ಲಿ ಅವರ ಬರಹಗಳು ಪ್ರಕಟಗೊಂಡವು. ಸ್ವಾರಸ್ಯವೇನೆಂದರೆ ಅವರೇ ಸ್ವತಃ 'ಚಂದ್ರಕಾಂತಿ' ಎಂಬ ಮಾಸಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸುತ್ತಿದ್ದರು. ಈ ಕೃತಿಯ 'ಹೊನ್ನುಡಿ'ಯಲ್ಲಿ ಶ್ರೀ ಸಿ.ಎಸ್.ರಾವ್, ವಿಶ್ರಾಂತ ಉಪ ಮಹಾಪ್ರಬಂಧಕರು, ಕಾರ್ಪೊರೇಷನ್ ಬ್ಯಾಂಕ್ ಹೀಗೆ ಬರೆದಿರುತ್ತಾರೆ–"ಶ್ರೀಯುತ ಮೋಹನ ರಾಯರು ಕಾಲೇಜಿನಲ್ಲಿ ಉಪನ್ಯಾಸಕರಾಗಿ, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದವರು. ಅವರೊಂದಿಗೆ ತನ್ನ ಬಹುಮುಖ ಪ್ರತಿಭೆಯನ್ನು ಬೆಳೆಸಿಕೊಂಡವರು. ಅವರಿಗೆ ಯಕ್ಷಗಾನದಲ್ಲಿದ್ದ ಅಭಿರುಚಿಯನ್ನು ಕಂಡಿದ್ದೇನೆ. ಈಗ ಅವರ ಸಾಹಿತ್ಯ ಆಸಕ್ತಿಯನ್ನು ಮೆಚ್ಚಿದ್ದೇನೆ. ಅವರು ಒಬ್ಬ ಉತ್ತಮ ಬರಹಗಾರರಾಗಿ ಮೂಡಿ ಬರುತ್ತಿದ್ದಾರೆ. 'ಎಂದೆಂದೂ ಮುಗಿಯದ ಕಥೆ' ಒಂದು ಉತ್ತಮ ಕಥಾಸಂಕಲನ." ಈ ಕೃತಿಯು ಪ್ರಕಟಣೆಯಾಗುತ್ತಿದ್ದಂತೆ ನನ್ನನ್ನು ತಲ್ಲಣಗೊಳಿಸಿದ ಸಂಗತಿ–ನನ್ನ ಧರ್ಮಪತ್ನಿಯ ನಿಧನ. ನನ್ನ ಬಾಳಸಂಗಾತಿ ನನ್ನ ಜೀವನದ ಮೂವತ್ತನಾಲ್ಕು ವರ್ಷಗಳಲ್ಲಿ ಸಹಕರಿಸುತ್ತಿದ್ದಂತೆ ಇನ್ನಿಲ್ಲವಾದಳು. ನನಗೆ ನನ್ನ ಬರಹಕ್ಕೆ ಪ್ರೇರಣೆ ಮತ್ತು ಪ್ರೀತಿ ನೀಡಿ ಮಕ್ಕಳಲ್ಲಿ ಧೈರ್ಯ ತುಂಬಿ ಅವರನ್ನು ಇಂಜಿನೀಯರ್‌ಗಳನ್ನಾಗಿ ಮಾಡಿ ನನ್ನ ಯಶಸ್ಸಿನ ಹಿಂದೆ ಸದಾ ಇರುತ್ತಿದ್ದಳು. ಶ್ರೀಮತಿ ಉಷಾ ಮೋಹನ್ ರಾವ್ ಇವಳಿಗೆ ಈ ಕೃತಿಯನ್ನು ಸಮರ್ಪಿಸಿದ್ದೇನೆ.




ಕೃತಿ : 'ಅತ್ತ ಇತ್ತ ಸುತ್ತಮುತ್ತ' ಮತ್ತು ಇತ್ಯಾದಿ ಕೃತಿಗಳು **ಲೇಖಕರು : ಶ್ರೀ ವೈ. ಮೋಹನ ರಾವ್** ಪ್ರಕಾಶನ : **ಬ್ರಹ್ಮಗಿರಿ ಪ್ರಕಾಶನ, ಅಂಬಲಪಾಡಿ, ಉಡುಪಿ** ಕೃತಿಯೊಂದರ ಬೆಲೆ : **ರೂ.40/-**

'ಬಣ್ಣ ಬಣ್ಣದ ಸಂಜೆಮಲ್ಲಿಗೆ'– ನೂರೆಂಟು ಚುಟುಕಗಳ ಸಂಕಲನ. ಇದು ಮೂರನೆಯ ಕೃತಿ. "ಇದುವೆ ಮೋಹನರಾಯ ರಚನೆಯ, ಪದ ಪದಕು ಹೊಸ ಹೊಸತನ, ಚುಟುಕು ಚುಟುಕಿಗು, ಗುಟುಕು ಗುಟುಕಿಗು, ಕಚಗುಳಿಯ ನವಚೇತನ" ಎಂದು ಶ್ರೀ ನಂದಳಿಕೆ ಬಾಲಚಂದ್ರ ರಾವ್ ಇವರು ಈ ಕೃತಿಗೆ ಶುಭ ಸಂದೇಶವನ್ನು ನೀಡಿದ್ದಾರೆ. 'ಹೊನ್ನುಡಿ'ಯಲ್ಲಿ ಪ್ರೊ। ಉದ್ಯಾವರ ಮಾಧವ ಆಚಾರ್ಯ, ಪ್ರಸಿದ್ಧ ಸಾಹಿತಿ–ರಂಗನಿರ್ದೇಶಕರು ಇವರು ಹೀಗೆ ಹೇಳುತ್ತಾರೆ–"ಮತ್ತೊಮ್ಮೆ ಮಗದೊಮ್ಮೆ ಭೇಟಿಯಾದಾಗ ಸಾಹಿತ್ಯದ ಕಲಾತ್ಮಕತೆಯನ್ನು ಮೆಚ್ಚುವ ರಾಯರಲ್ಲಿ ಅಪಾರ ಜೀವನ ಶ್ರದ್ಧೆ ಬದ್ಧತೆಗಳನ್ನು ನಾನು ಕಂಡದ್ದರಿಂದಲೇ ಈ ಪುಸ್ತಕದ ಚುಟುಕುಗಳು ಬೆಳಗಿನ ರಾಗದ ಗಾಯನದಂತೆ ನನ್ನೆದೆ ಮುಟ್ಟಿತು. ನನ್ನ ಮನೆಯ ಎಲ್ಲರಿಗೆ ಅದರಲ್ಲೂ ಅವರ ಪತ್ನಿಯ ಸಂಗೀತ ಶಿಷ್ಯೆಯಾಗಿದ್ದ ನನ್ನ ಕಿರಿಯ ಮಗಳಿಗೆ ರಾಯರ ಒಳಧ್ವನಿಯಲ್ಲಡಗಿದ ವಿಷಾದ ಹೆಚ್ಚು ಹತ್ತಿರವಾಗುವಂತಿವೆ ಈ ಚುಟುಕುಗಳಲ್ಲಡಗಿದ ಆಪ್ತ ಸ್ವರಗಳು". ಈ ಕೃತಿಯನ್ನು ನನ್ನ ಅಮ್ಮನಿಗೆ ಅರ್ಪಿಸಿದೆನು.

'ನಗೆಯು ಬರುತಿದೆ ಎನಗೆ'–ಹಾಸ್ಯ ಲೇಖನಗಳ ಸಂಕಲನ–ಇದು ನನ್ನ ನಾಲ್ಕನೆಯ ಕೃತಿ. ಈ ಕೃತಿಗೆ ಶುಭ ಸಂದೇಶವನ್ನು ನೀಡಿ ಸಹಕರಿಸಿದವರು ಶ್ರೀ ಎ.ಈಶ್ವರಯ್ಯ, ಪ್ರಸಿದ್ಧ ಪತ್ರಕರ್ತರು–ವಿಮರ್ಶಕರು–ಸಾಹಿತಿಗಳು. ಇವರು 'ಹೊನ್ನುಡಿ'ಯಲ್ಲಿ ಹೀಗೆ ಬರೆದಿರುವರು–"ವಿನೋದ ವಸ್ತುವಿನಲ್ಲಿರುವುದಿಲ್ಲ. ಅದಿರುವುದು ಅದನ್ನು ನೋಡುವ ನಮ್ಮ ದೃಷ್ಟಿಯಲ್ಲಿ. ತೀರ ಸಾಮಾನ್ಯವೆನಿಸುವ ವಿಚಾರದಲ್ಲಿ ಕೂಡ ವಿನೋದವನ್ನು ಕಾಣುವುದು ಹಾಸ್ಯ ಪ್ರಜ್ಞೆಯ ಲಕ್ಷಣ. ಇದಕ್ಕೆ ದೃಷ್ಟಾಂತ ಈ ಸಂಕಲನದಲ್ಲಿರುವ ಮೋಹನರಾಯರ ಲೇಖನಗಳು." 'ಹೊನ್ನುಡಿ'ಯಲ್ಲಿ ಎಸ್. ನಿತ್ಯಾನಂದ ಪಡ್ರೆ– ಉದಯವಾಣಿ ಪತ್ರಿಕೆಯ ಹಿರಿಯ ಸಂಪಾದಕರು ಹೀಗೆ ಬರೆದಿರುತ್ತಾರೆ–"ನನ್ನೊಳಗೊಬ್ಬ ಉಪನ್ಯಾಸಕನಿದ್ದಾನೆ ಎನ್ನುವ ಭ್ರಮೆ ನನ್ನದು. ಅವನು ತನ್ನ ಎಕೌಂಟೆನ್ಸಿ ಸಂದೇಹಗಳನ್ನು ಪರಿಹರಿಸಲು ನೆರವು ಕೋರುತ್ತಿದ್ದುದು ಮೋಹನರಾಯರಲ್ಲಿ. ನನ್ನೊಳಗೆ ಉಪನ್ಯಾಸಕನಿರುವಂತೆ ಮೋಹನರಾಯರೊಳಗೂ ಒಬ್ಬ ಬರಹಗಾರನಿದ್ದಾನೆ. ಅವನಿಗೆ ಆಗೀಗ ಪ್ರಕಟವಾಗುವ ಬಯಕೆ, ಚುಟುಕದ ಮೂಲಕವೋ, ಸುತ್ತು ನೋಟದ ಮೂಲಕವೋ, ನಗೆ ಬರಹಗಳ ಮೂಲಕವೋ ಆತ ಹೊರ ಜಗತ್ತಿಗೆ ಬರಲು ಬಹಳಷ್ಟು ಹಿಂದಿನಿಂದಲೂ ಚಡಪಡಿಸುತ್ತಲೇ ಇದ್ದ. ಈ ಕಾರಣದಿಂದ ಅವರು ನನ್ನ ಗೆಳೆತನದ ಪರಿಧಿಯೊಳಗೆ ಅನಾಯಾಸವಾಗಿ ಕಾಣಿಸಿಕೊಂಡರು. ಅವರ ಅನೇಕ ಚಿತ್ರಾವಳಿ ಬರೆಹಗಳು ಉದಯವಾಣಿ ಸಹಿತ ಅನೇಕ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಅವನ್ನು ಸಂಗ್ರಹಿಸಿ ಪ್ರಕಟಿಸಿದರೆ ಒಂದು ಪುಸ್ತಕವೇ ಆಗಬಹುದು. ಈ ಕೃತಿಯನ್ನು ನನ್ನ ತಂದೆಗೆ ಅರ್ಪಿಸಿದ್ದೇನೆ.

'ವಸುಧೆಯೊಳಡಗಿತು ಈ ಕಾಡು ಮೇಡು'–ರೇಡಿಯೋ ಚಿಂತನಗಳ ಸಂಕಲನ– ಇದು ನನ್ನ ಐದನೆಯ ಕೃತಿ. 'ಶುಭ ಸಂದೇಶ'ದಲ್ಲಿ ನನ್ನ ಸಹಪಾಠಿ ಮತ್ತು ಮಿತ್ರರಾದ ಡಾ। ಎಮ್. ಪ್ರಭಾಕರ ಜೋಷಿ, ವಿಶ್ರಾಂತ ಪ್ರಾಂಶುಪಾಲರು ಹೀಗೆ ನುಡಿದಿದ್ದಾರೆ–"ಬದುಕಿನ ಹಲವು ವಿಷಯಗಳ ಕುರಿತು, 'ಆಕಾಶವಾಣಿ ಚಿಂತನ' ಕಾರ್ಯಕ್ರಮದ ಮಿತಿಯಲ್ಲಿ ಬರೆದ ಕಿರು ಬರಹಗಳಿವು. ವಿಷಯಗಳ ವ್ಯಾಪ್ತಿ, ಚೊಕ್ಕ ನೇರ ನಿರೂಪಣೆ, ಮಾಹಿತಿ, ಅನುಭವ, ಅಲಂಕಾರಗಳ ಹದವಾದ ಸೇರ್ಪಡೆಗಳಿಂದ ಕೂಡಿದ ಈ ಬರಹಗಳು–ವಿಚಾರಶೀಲತೆಗೆ ಪ್ರೇರಕವಾದ ಕೈಪಿಡಿಯಂತಿವೆ. ವಸುಧಾಹಿತದ ಚಿಂತನವಾಗಿದೆ". ಈ ಕೃತಿಯಲ್ಲಿ 'ಹೊನ್ನುಡಿ' ಬರೆದವರು ಅಶ್ವತ್ಥ್ ಭಾರಧ್ವಾಜ ಕಬ್ಬಿನಾಲೆ, ಕನ್ನಡ ಉಪನ್ಯಾಸಕರು. ಇವರು 'ಹೊನ್ನುಡಿ'ಯಲ್ಲಿ ಹೀಗೆ ತಿಳಿಸುತ್ತಾರೆ–"ವೈ.ಮೋಹನ ರಾವ್ ಮಿದು ಸ್ವಭಾವದ ಅಪರೂಪದ ಲೇಖಕರು. ಸುತ್ತಲ ಸಮಾಜವನ್ನು ಹೊರ ಕಣ್ಣಿನಿಂದ ನೋಡಿ ಒಳಗಣ್ಣಿನ ಚಿಂತನೆಯ ಮೂಸೆಯಲ್ಲಿ ವಿಶ್ಲೇಷಿಸಬಲ್ಲವರು. ಹಿಂದಿನ ತಲೆಮಾರಿನ ಪುರಾಣಪ್ರಜ್ಞೆಯ ಸೊಗಸು ಕತೆಗಳನ್ನು ತಿಳಿದು ಅಕ್ಷರರೂಪಕ್ಕಿಳಿಸಬಲ್ಲ ಅಪೂರ್ವ ಲೇಖಕರು. ಜೊತೆಗೆ ಆಧುನಿಕ ಆಲೋಚನಾ ಗತಿಸ್ಥಿತಿಗಳ ಖಚಿತವಾದ ಅರಿವುಳ್ಳವರು. ಹೀಗಾಗಿ ಅವರ ಬರೆಹಗಳು ಒಂದು ತೆರನಾದ ಸಮತೋಲನ ಮತ್ತು ಸಮನ್ವಯ ದೃಷ್ಟಿಕೋನಗಳಿಂದ ಪರಿಪ್ಲುತವಾಗಿ ಇರುತ್ತದೆ. ವಿಷಯಗಳು ಸಣ್ಣದಿರಲಿ–ದೊಡ್ಡದಿರಲಿ, ಹಳತಿರಲಿ ಹೊಸತಿರಲಿ ಎಲ್ಲವನ್ನೂ ಆಕರ್ಷಕವಾಗಿ ಮುಟ್ಟಿಸಿ ಓದುಗರ ಮನವನ್ನು ತಟ್ಟಬಲ್ಲವರು". ಈ ಕೃತಿಯನ್ನು ನನ್ನ ದೊಡ್ಡಮ್ಮನಿಗೆ ಅರ್ಪಿಸಿರುವೆನು.

'ಅತ್ತ ಇತ್ತ ಸುತ್ತಮುತ್ತ'–ಬರಹಗಳ ಸಂಕಲನ–ಇದು ನನ್ನ ಆರನೆಯ ಕೃತಿ. ಈ ಕೃತಿಗೆ ಶುಭ ಸಂದೇಶವನ್ನು ನೀಡಿದವರು ಡಾ। ವೈ. ಅವನೀಂದ್ರನಾಥ್ ರಾವ್. ಇವರು ಹೀಗೆ ತಿಳಿಸುತ್ತಾರೆ–"ಮಾತು, ಬರಹ, ಓದು, ತಿರುಗಾಟಗಳಿಂದ ಸದಾಕಾಲ ಕ್ರಿಯಾಶೀಲರಾಗಿರುವ ಹಿರಿಯ ಲೇಖಕ ವೈ.ಮೋಹನ್ ರಾವ್ ಅವರು ತನ್ನ ಸುತ್ತಲ ಪರಿಸರವನ್ನು ಕುತೂಹಲದ ಕಣ್ಣುಗಳಿಂದ ನೋಡಿದ್ದಾರೆ. ಅದಕ್ಕೆ ನಿರಂತರವಾಗಿ ಸ್ಪಂದಿಸಿ ಪ್ರತಿಕ್ರಿಯೆ ನೀಡಿದ್ದಾರೆ. ಅವರ ಈ ಪ್ರೀತಿಯ ನೋಟವೇ ಈ ಸಂಕಲನದ ಅಕ್ಷರ ಬೆಡಗು" 'ಹೊನ್ನುಡಿ"ಯಲ್ಲಿ ಜಯರಾಮ ಕಾರಂತ ಕಾಂತವರ ಇವರು ಹೀಗೆ ಬರೆದಿದ್ದಾರೆ–"ಈ ಕಿರುಲೇಖನಗಳ ಸಂಕಲನದ ಕರ್ತೃ ವೈ. ಮೋಹನ ರಾವ್. ಅವರು ಉಡುಪಿ ಜಿಲ್ಲೆಯ ಬಾರಕೂರಿನ ನ್ಯಾಶನಲ್ ಜ್ಯೂನಿಯರ್ ಕಾಲೇಜಿನಲ್ಲಿ ಸುಮಾರು ಮೂರು ದಶಕಗಳ ಕಾಲ ವಾಣಿಜ್ಯ ಶಾಸ್ತ್ರ ಉಪನ್ಯಾಸಕರಾಗಿದ್ದು, ಹರೆಯದ ಮನಸ್ಸುಗಳ ಸಾಹಿತ್ಯ ಕಲಾಸಕ್ತಿಯ ವಿಕಸನವನ್ನು ಹತ್ತಿರದಿಂದ ಅಭ್ಯಸಿಸಿರುವವರು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಕಲಾತ್ಮಕ, ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ತುಂಬು ಗೌರವವುಳ್ಳ ಸರಳ ವ್ಯಕ್ತಿ. ಸುಸಂಸ್ಕೃತ ನಡೆ–ನುಡಿಯ ಭಾವಜೀವಿ; ಸ್ವಾರ್ಥವಿಲ್ಲದೆ ವ್ಯವಹರಿಸಬಲ್ಲ ಸ್ನೇಹ ಜೀವಿ; ನಿಜವಾದ ಅರ್ಥದಲ್ಲಿ ಪ್ರಚಾರ ಪರಾನ್ಮುಖವಾಗಿ ಸಾಹಿತ್ಯ ಜೀವಿ." ಈ ಕೃತಿಯನ್ನು ನನ್ನ ಸೋದರತ್ತೆ ಶ್ರೀಮತಿ ಲಲಿತ ಅವರಿಗೆ ಸಮರ್ಪಿಸಿದ್ದೇನೆ.

ಯಕ್ಷಗಾನದಲ್ಲಿ ನನಗೆ ಆಸಕ್ತಿ ಇದ್ದುದರಿಂದ, ಯಕ್ಷಗಾನ 'ಹಿಡಿಂಬಾ ವಿವಾಹ'ದಲ್ಲಿ 'ವೇದವ್ಯಾಸ' ಮಹರ್ಷಿ ಪಾತ್ರದಲ್ಲಿ, ಯಕ್ಷಗಾನ 'ಜಾಂಬವತಿ ಕಲ್ಯಾಣ'ದಲ್ಲಿ 'ನಾರದ ಮಹರ್ಷಿ' ಪಾತ್ರದಲ್ಲಿ, ಯಕ್ಷಗಾನ 'ಮಧುರಾ ಮಹೀಂದ್ರ'ದಲ್ಲಿ 'ಅಕ್ರೂರ'ನ ಪಾತ್ರದಲ್ಲಿ, ಯಕ್ಷಗಾನ 'ವೀರಮಣಿ ಕಾಳಗ'ದಲ್ಲಿ 'ಶ್ರೀರಾಮ'ನ ಪಾತ್ರದಲ್ಲಿ, ಯಕ್ಷಗಾನ 'ಧರ್ಮಾಂಗದ ವಿಜಯ'ದಲ್ಲಿ 'ವಿಷ್ಣು'ವಿನ ಪಾತ್ರದಲ್ಲಿ ಮತ್ತು ಯಕ್ಷಗಾನ 'ಕರ್ಣನಂದನ'ದಲ್ಲಿ ಶ್ರೀಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡಿರುವೆನು. ಈ ಎಲ್ಲಾ ಪಾತ್ರಗಳ ಚಿತ್ರಗಳು ಕೃತಿಯ ಒಳಪುಟದಲ್ಲಿವೆ. ಇನ್ನೊಂದು, ಎರಡು ಕೃತಿಗಳನ್ನು ರಚಿಸಲಿಕ್ಕಿದೆ. ಒಂದು 'ನಿತ್ಯೋತ್ಸವ ಕಂಡ ಬಾರ್ಕೂರು'. ಇದು ಅರ್ಧಾಂಶದಷ್ಟು ಆಗಿದೆ. ಇನ್ನೊಂದು 'ತುಳುವಿನಲ್ಲಿ ಗೀತೆಯ ಶ್ಲೋಕಗಳ ಅರ್ಥ'. ದೇವರ ಕೃಪೆ, ನಿಮ್ಮೆಲ್ಲರ ಪ್ರೋತ್ಸಾಹ, ಸಹಕಾರ ಮತ್ತು ಪ್ರೀತಿಯಿಂದಲೇ ಇದು ಸಾಧ್ಯ.

ಹೆಚ್ಚು ಇನ್ನೇನ ಹೇಳಲಿ, ಕೃತಜ್ಞತೆಗಳು..

## ಶ್ರೀ ಮ.ನ. ಹೆಬ್ಬಾರರು ಅನುವಾದಿಸಿದ ಪುಸ್ತಕ ಬಿಡುಗಡೆ ಸಮಾರಂಭ



ಶ್ರೀ ಶ್ರೀ ನಿತ್ಯಾನಂದ ಸ್ವಾಮಿಗಳ ಜೀವನ ಚರಿತ್ರೆಯ ಪುಸ್ತಕವು ಹಿಂದಿ ಭಾಷೆಯಲ್ಲಿದ್ದುದನ್ನು ಹರಿದಾಸ ಶ್ರೀ ಮ.ನಾ.ಹೆಬ್ಬಾರರು ಕನ್ನಡಕ್ಕೆ ಅನುವಾದಿಸಿದ್ದು, ಈ ಪುಸ್ತಕವು ಇತ್ತೀಚೆಗೆ ಭಾರತ್ ಪ್ರೆಸ್, ಕಲ್ಸಂಕ, ಇಲ್ಲಿ ಶ್ರೀ ಮ.ನಾ ಹೆಬ್ಬಾರರಿಂದ ಬಿಡುಗಡೆಗೊಂಡಿತು. ಪ್ರೆಸ್ಸಿನ ಮಾಲಕರಾದ ಶ್ರೀ ದೇವದಾಸ ಪೈ ಯವರು ಸಭಾಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ಕಾಲೇಜಿನ ಗ್ರಂಥಾಪಾಲಕರಾದ ಶ್ರೀ ಎ.ಹರಿಕೃಷ್ಣರಾವ್, ಪುಸ್ತಕದ ಪ್ರಾಯೋಜಕರಾದ ಉದಯಾನಂದ ಇವರುಗಳು ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ಶ್ರೀ ಗಣೇಶ ಪೈ ಯವರು ಮಾತನಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಕೊನೆಯಲ್ಲಿ ಶ್ರೀ ಹರಿಕೃಷ್ಣ ರಾಯರು ಧನ್ಯವಾದವಿತ್ತರು.



# ಅಮೇರಿಕಾದಲ್ಲಿ ತೆಂಕುತಿಟ್ಟು ಯಕ್ಷಗಾನ



“ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿ (ರಿ.) ಬೆಳುವಾಯಿ”, ಮೂಡಬಿದಿರೆ ಈ ಸಂಸ್ಥೆಯೂ ಸಂಯೋಜಿಸಿರುವ ಕಲಾ ತಂಡವು ಅಮೇರಿಕಾದ ವಿವಿಧ ಕಡೆಗಳಲ್ಲಿ ಅಲ್ಲಿಯ ಕೆಲವು ಹಿಂದು ದೇವಾಲಯ ಹಾಗೂ ಕನ್ನಡ ಸಂಘಗಳ ಆಶ್ರಯದಲ್ಲಿ, ಜುಲೈ 14 ರಿಂದ ಆಗಸ್ಟ್ 20 ರವರೆಗೆ ‘ಮಹಿಷಮರ್ದಿನಿ, ಶ್ರೀ ದೇವಿ ಮಹಾತ್ಮ್ಯೆ, ಸುಧನ್ವಕಾಳಗ.... ಮುಂತಾದ ಪ್ರಸಂಗಗಳ ನೀಡುವುದರೊಂದಿಗೆ ಯಕ್ಷಗಾನ ತಾಳಮದ್ದಳೆಗಳನ್ನು ಪ್ರಸ್ತುತ ಪಡಿಸಲಿದೆ. ಈ ತಂಡವು ಪ್ರಸಿದ್ಧ ಕಲಾವಿದರುಗಳಾದ ಪಟ್ಲ ಸತೀಶ್ ಶೆಟ್ಟಿ, ಪದ್ಮನಾಭ ಉಪಾಧ್ಯ, ಎಮ್.ದೇವಾನಂದ ಭಟ್ ಬೆಳುವಾಯಿ, ಎಮ್.ಎಲ್ ಸಾಮಗ, ಚಂದ್ರಶೇಖರ ಧರ್ಮಸ್ಥಳ, ಮಹೇಶ್ ಮಣಿಯಾಣಿ, ಮೋಹನ್ ಬೆಳ್ಳಿಪಾಡಿ ಹಾಗೂ ಪ್ರಶಾಂತ್ ಶೆಟ್ಟಿ ನೆಲ್ಯಾಡಿ ಇವರನ್ನು ಒಳಗೊಂಡಿದೆ. ಅಮೇರಿಕಾ ಪ್ರವಾಸದ ಪೂರ್ವಸಿದ್ಧತೆಯಲ್ಲಿ ಇದೇ ತಂಡವು ಚೆನ್ನೈನ ಅಂತಾರಾಷ್ಟ್ರೀಯ ಖ್ಯಾತಿಯ ಸಂಗೀತ ಹಾಗೂ ನೃತ್ಯ ಶಿಕ್ಷಣ ಸಂಸ್ಥೆಯಾದ “ಕಲಾಕ್ಷೇತ್ರ” ದಲ್ಲಿ ಪ್ರಾತ್ಯಕ್ಷಿಕೆಯೊಂದಿಗೆ ‘ನರಕಾಸುರ ವಧೆ’ ಎಂಬ ಕಥಾನಕವನ್ನು ಪ್ರದರ್ಶಿಸಿತು. ಕಲಾಕ್ಷೇತ್ರದ ನಿರ್ದೇಶಕಿ ಖ್ಯಾತ ನೃತ್ಯ ಕಲಾವಿದೆ ಶ್ರೀಮತಿ ರೇವತಿ ರಾಮಚಂದ್ರನ್ ಅವರು ಕಲಾಕ್ಷೇತ್ರ ವಿದ್ಯಾರ್ಥಿ ಹಾಗೂ ಅಧ್ಯಾಪಕರ ಪರವಾಗಿ ಈ ತಂಡವನ್ನು ಅಭಿನಂದಿಸಿ ಕಲಾಪ್ರವಾಸಕ್ಕೆ ಶುಭವನ್ನು ಕೋರಿದರು. ಯಕ್ಷಗಾನದ ಶ್ರೇಷ್ಠತೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇದೇ ತಂಡವು ಚೆನ್ನೈನ ಕನ್ನಡ ಸಂಘದಲ್ಲಿ ‘ದಕ್ಷಯಜ್ಞ’ ಎಂಬ ಆಟವನ್ನೂ ಬಂಟರ ಸಂಘದ ಆಶ್ರಯದಲ್ಲಿ ‘ಭೀಷ್ಮಾರ್ಜುನ’ ಎಂಬ ತಾಳಮದ್ದಳೆಯನ್ನು ಪ್ರಸ್ತುತಪಡಿಸಿ ಅಪಾರ ಜನಮೆಚ್ಚುಗೆಯನ್ನು ಪಡೆಯಿತು ಎಂದು ‘ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿಯ ಮುಖ್ಯಸ್ಥರಾದ ದೇವಾನಂದ ಭಟ್ ಅವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಹೆಬ್ಬೂರಿನಲ್ಲಿ ಸಮಾಜಬಾಂಧವರಿಂದ ಶ್ರೀಶ್ರೀ ಮಾಧವಾಶ್ರಮ ಸ್ವಾಮೀಜಿಗಳ ಭೇಟಿ

ತಾ.05–08–2018ರ ರವಿವಾರ ತುಮಕೂರು–ಹೆಬ್ಬೂರಿನ ಶ್ರೀ ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠದಲ್ಲಿ ವರ್ಷಂಪ್ರತಿ ನಡೆಯುವ ಋಕ್‌ಸಂಹಿತಾ ಯಾಗದ ಕೊನೆಯ ದಿನದಂದು ಶ್ರೀ ಕಾಮಾಕ್ಷೀ ದೇವಿಯ ದರ್ಶನ ಹಾಗೂ ಚಾತುರ್ಮಾಸ ವ್ರತದಲ್ಲಿರುವ ಪೀಠಾಧಿಪತಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಆಶೀರ್ವಾದಕ್ಕಾಗಿ ಸಮಾಜ ಬಾಂಧವರು ಜೊತೆಯಾಗಿ ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದರು.

ಬೆಂಗಳೂರು, ಮೈಸೂರು, ಮಂಗಳೂರು, ಪುತ್ತೂರು, ಉಡುಪಿ ಮೊದಲಾದ ಊರುಗಳಿಂದ ಬೇರೆ ಬೇರೆ ಸಂಘಟನೆಗಳ ಭಕ್ತಬಾಂಧವರು ಬೆಳಿಗ್ಗೆ ಯಾಗದ ಪೂರ್ಣಾಹುತಿಯ ಮೊದಲೇ ಶ್ರೀ ಮಠಕ್ಕೆ ಬಂದು ಸೇರಿದ್ದರು. ಯಾಗ ಸಂಪನ್ನಗೊಂಡ ನಂತರ ಶ್ರೀ ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಗಣ್ಯರಿಗೆ ಶಾಲು, ಸ್ಮರಣಿಕೆ, ಫಲ, ಪುಷ್ಪಗಳೊಂದಿಗೆ ಗೌರವ ಸಲ್ಲಿಸಲಾಯಿತು. ವಿವಿಧ ಸಂಘಟನೆಗಳ ಗಣ್ಯರ ಜೊತೆಯಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಮಹಾಪರಿಷತ್ತಿನ ಅಧ್ಯಕ್ಷರು, ಮಂಗಳೂರಿನಿಂದ ಶ್ರೀ ಜಗನ್ನಿವಾಸರಾವ್, ಬೆಂಗಳೂರಿನಿಂದ ಶ್ರೀ ಶರತ್ ಕುಮಾರ್, ಉಡುಪಿಯಿಂದ ವೇದಬ್ರಹ್ಮಶ್ರೀ ವಾಗೀಶ ಶಾಸ್ತ್ರೀ ಮತ್ತು ಶ್ರೀ ಪ್ರಫುಲ್ಲಚಂದ್ರರಾವ್ ಮೊದಲಾದವರು ಶ್ರೀ ಮಠದ ಗೌರವ ಸ್ವೀಕರಿಸಿದರು.

ನಂತರ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರು ನೆರೆದ ಭಕ್ತಸಮುದಾಯವನ್ನುದ್ದೇಶಿಸಿ ಆಶೀರ್ವಚನ ಮಾಡಿದರು. ತೀರ್ಥಪ್ರಸಾದ ವಿತರಣೆಯೂ ನೆರವೇರಿತು. ಮಧ್ಯಾಹ್ನದ ಅನ್ನಸಂತರ್ಪಣೆಯ ನಂತರ ಸಮಾಜ ಬಾಂಧವರು ಧನ್ಯತಾ ಭಾವದೊಂದಿಗೆ ತಮ್ಮ ತಮ್ಮ ಊರುಗಳಿಗೆ ನಿರ್ಗಮಿಸಿದರು.

## ಸುಬ್ರಹ್ಮಣ್ಯ ಸಭಾದಲ್ಲಿ ಆಟಿತೊ ಆಟ ಕೂಟ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಇತ್ತೀಚೆಗೆ ಆಟಿತೋ ಆಟ ಕೂಟ ಜರಗಿತು. ಬೆಳಗ್ಗಿನ ಅವಧಿಯಲ್ಲಿ ಚೆನ್ನಮಣೆ ಸ್ಪರ್ಧೆಯೊಂದಿಗೆ ಆಟಿತೋ ಆಟ ಕೂಟ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಆಟಿಯ ಸಾಂಪ್ರದಾಯಿಕ ಆಟ ಚೆನ್ನಮಣೆ ಸ್ಪರ್ಧೆಯೊಂದಿಗೆ ಕೇರಂ, ಚೆಸ್ ಪಂದ್ಯಾಟಗಳು ನಡೆದವು. ಮಹಿಳಾ ವೇದಿಕೆಯ ಕುಸುಮಾ ನವೀನ ಕುಮಾರ್ ಚೆನ್ನಮಣೆ ಸ್ಪರ್ಧೆಯನ್ನು ಯುವ ವೇದಿಕೆಯ ಸುರೇಶ್ ಕಡಬ ಚೆಸ್, ಸಿ. ರಾಘವೇಂದ್ರ ರಾವ್ ಕೇರಂ ಸ್ಪರ್ಧೆಯನ್ನು ನಿರ್ವಹಿಸಿದರು. ಮನೀಶ್ ರಾವ್, ಅನಿಲ್ ಎನ್.,ಶೈಲಜಾ ಶ್ರೀಕಾಂತ್, ಡಾ। ಜಯಲಕ್ಷ್ಮೀ ಸಹಕರಿಸಿದರು.

ಮಧ್ಯಾಹ್ನ ಆಟಿಯ ವಿಶೇಷ ಖಾದ್ಯಗಳದ ಹುರುಳಿ ಸಾರು, ಉಪ್ಪಡ್ ಪಚ್ಚಿಲ್ ಪಲ್ಯ, ಪತ್ರೊಡೆ, ಪೂಂಬೆ ಚಟ್ನಿ, ಹಾಲ್ ಬಾಯಿ, ಪೇರಡ್ಯ ಪಾಯಸ, ಹಲಸಿನ ಬೋಳೆ ಸಾಂಬಾರ್, ಸಜಂಕ್, ವಡೆ ಒಳಗೊಂಡ ಭೋಜನವನ್ನು ತಯಾರಿಸಲಾಗಿತ್ತು.

ಸಂಘದಿಂದ ಸಿಗುವ ವಿವಿಧ ಸವಲತ್ತುಗಳ ಬಗ್ಗೆ ಕಾಯನಿರ್ವಹಣಾಧಿಕಾರಿ ಉದಯ ಕುಮಾರ್ ಪಿ. ಮಾಹಿತಿ ನೀಡಿದರು. ಅನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರಗಿದವು. ಕೋಶಾಧಿಕಾರಿ ಪಿ. ಶ್ರೀಕಾಂತ್ ರಾವ್ ನಿರ್ವಹಿಸಿದರೆ, ಪದಾಧಿಕಾರಿಗಳು, ಸದಸ್ಯರು ಸಹಕಾರ ನೀಡಿದರು.

(ಫೋಟೋ 9ನೇ ಪುಟದಲ್ಲಿ)

With Best Compliments From :

Ph : 98459 92859

Ganesh Hebbar & Associates

CHARTERED ACCOUNTANT

S.M.S.P. Complex, Udupi - 576 101.

## ಶ್ರೀಶಾರದಾ ತುರ್ತು ಸೇವಾ ಸಮಿತಿ

ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಿಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | – | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | – | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | – | 9343572490 |
| 4. | ನಂದಳಿಕೆ ಉಮೇಶ್ ರಾವ್ | – | 8970504176 |
| 5. | ಹೆರ್ಗ ನಿರಂಜನ ರಾವ್ | – | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | – | 9448252736 |
| 7. | ಟಿ.ಜಗದೀಶ ರಾವ್ | – | 9686123905 |
| 8. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | – | 9945379479 |
| 9. | ಅಜಿತ್ ರಾವ್ ಬೈಲೂರು | – | 9448108920 |
| 10. | ಅದ್ಯಪಾಡಿ ಮೋಹನದೇವ್ | – | 0820–2535328 |
| 11. | ಡಾ। ವೈ. ಸುದರ್ಶನ್ ರಾವ್ | – | 9845136322 |
| 12. | ವೈ. ಪ್ರಕಾಶ್ ಕುಮಾರ್ | – | 9448445617 |
| 13. | ವೈ. ಪ್ರಸಾದ್ ಕುಮಾರ್ | – | 9036252105 |
| 14. | ಬಿ. ಜಯರಾಮ ರಾವ್ | – | 9844545040 |
| 15. | ಎಮ್.ಪಾಲಚಂದ್ರ ರಾವ್ | – | 0820–2521366 |
| 16. | ಕೆ. ವೆಂಕಟ್ ರಾವ್ | – | 9480016125 |
| 17. | ಎಸ್.ಎಮ್.ರಾವ್ | – | 9449914040 |
| 18. | ಐ.ಕೆ.ಜಯಚಂದ್ರ ರಾವ್ | – | 9448331683 |

## ಮತದಾರರ ಜಾಗೃತಿ ಸಮಿತಿಯಲ್ಲಿ ಸವಿತಾ ಎರ್ಮಾಳ್



ಸವಿತಾ ಎರ್ಮಾಳ್, ಇವರು ಉಡುಪಿ ಜಿಲ್ಲೆಯ SVEEP ಸಮಿತಿ (ಮತದಾರರ ಜಾಗೃತಿ ಸಮಿತಿ) ಯ ಸಂಪನ್ಮೂಲ ವ್ಯಕ್ತಿಯಾಗಿ ಆಯ್ಕೆಯಾಗಿದ್ದು, 2018 ರ ಮೇ ತಿಂಗಳಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಮತದಾರರ ಜಾಗೃತಿ ಮೂಡಿಸುವ ಗುರುತರವಾದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವರು. ಮತದಾರರ ಜಾಗೃತಿಗಾಗಿ ಕನ್ನಡ, ತುಳು ಭಾಷೆಗಳಲ್ಲಿ ಹಾಡುಗಳನ್ನು, ಯಕ್ಷಗಾನದ ಹಾಡುಗಳನ್ನು, ಕಿರು ಪ್ರಹಸನಗಳನ್ನು ಸ್ವತ: ಇವರೇ ರಚಿಸಿರುವರು. ರಾಜ್ಯ ಚುನಾವಣಾ ಆಯೋಗದಿಂದ ಆಯ್ಕೆಯಾದ ಉಡುಪಿ ಜಿಲ್ಲೆಯ ಐಕಾನ್ ಗಳಿಗೆ ಅಭಿಪ್ರಾಯಗಳನ್ನು ಬರೆದು ನೀಡಿರುವರು. ಸ್ಟುಡಿಯೋದಲ್ಲಿ ಇವೆಲ್ಲವುಗಳನ್ನು ರೆಕಾರ್ಡಿಂಗ್ ಮಾಡಿಸಿದ್ದಲ್ಲದೆ ಸ್ವತ: ತಾವೇ ತುಳು ಹಾಡನ್ನು ಹಾಡಿ ಜನಮನಗೆದ್ದಿರುವರು. ಇವರು ತಯಾರಿಸಿದ CDಯು ಉಡುಪಿ ಜಿಲ್ಲೆಯಾದ್ಯಂತ ಮತದಾರರನ್ನು ಜಾಗೃತಿಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿರುತ್ತದೆ. ಇವರೆಲ್ಲರ ಕಾರ್ಯದ ಫಲವಾಗಿ ಉಡುಪಿ ಜಿಲ್ಲೆಯಲ್ಲಿ ಈ ಬಾರಿ ಸರಾಸರಿ ಮತದಾನದಲ್ಲಿ ಶೇಕಡಾ 2.5 ಹೆಚ್ಚಿರುವುದು ಹೆಮ್ಮೆಯ ವಿಷಯ. ಉಡುಪಿ ಜಿಲ್ಲಾಧಿಕಾರಿಯವರಾದ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಇವರು ಚುನಾವಣಾ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿದ್ದನ್ನು ಪರಿಗಣಿಸಿ, ಸವಿತಾ ಎರ್ಮಾಳ್ ಇವರಿಗೆ ಅಭಿನಂದನಾ ಪತ್ರ ನೀಡಿ ಗೌರವಿಸಿರುವರು. ಸವಿತಾ ಎರ್ಮಾಳ್ ಇವರು ಎರ್ಮಾಳಿನ ದಿವಂಗತ ವೈ ಮೋಹನ ರಾವ್ ಮತ್ತು ಭಾರತಿ ದಂಪತಿಗಳ ಪ್ರಥಮ ಪುತ್ರಿ. ಪ್ರಸ್ತುತ ಬಾರಕೂರಿನಲ್ಲಿ ವಾಸವಾಗಿರುವ ಉದ್ಯಮಿ ಕುಮಾರಸ್ವಾಮಿ ಬಿ.ಆರ್. ಇವರ ಧರ್ಮಪತ್ನಿ. ಇವರಿಗೆ ಬಾಲ್ಯದಿಂದಲೂ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ ಇದ್ದು, ನಾಟಕ, ಏಕಪಾತ್ರಾಭಿನಯ, ಪ್ರಹಸನ, ಭಾಷಣಗಳಲ್ಲಿ ತೊಡಗಿಸಿಕೊಂಡವರು. ಇವರಿಗೆ ಸಂಘದ ಪರವಾಗಿ ಅಭಿನಂದನೆಗಳು.

SAMPATH KUMAR Mobile : 9741508881

TRISHULINI TOURIST

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿನ ಅಪೂರ್ವ ಅನುಭವಗಳು

–ಡಾ. ವೈ. ರವೀಂದ್ರನಾಥ ರಾವ್, ಬ್ರಹ್ಮಾವರ.

(ಹಿಂದಿನ ಸಂಚಿಕೆಯಿಂದ)

ಮರುದಿವಸ ನಮ್ಮ ಪ್ರವಾಸ ಅಬುದಾಬಿಯ ಸಿಟಿ ಟೂರ್ ಮತ್ತು ಯಾಸ್ ಐಲ್ಯಾಂಡ್‌ನಲ್ಲಿನ "ಫೆರಾರಿವೆಲ್ಡ್" ಆಗಿತ್ತು. ಯಾಸ್ ಐಲ್ಯಾಂಡ್ ಅಬುದಾಬಿ ನಗರದ ಹತ್ತಿರವಿದ್ದು ಇಲ್ಲಿ ಎಲ್ಲಾ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ, ವ್ಯಾಪಾರ ಮಳಿಗೆಗಳನ್ನೂ ನೋಡಿ, ವ್ಯವಹರಿಸಿ ಆನಂದಿಸಬಹುದು. ಇಲ್ಲಿ ವಿವಿಧ ನಗರಾಡಳಿತ ಪ್ರದೇಶಗಳನ್ನು ಸುಲಭದಲ್ಲಿ ಗುರುತಿಸಲು ಹೆದ್ದಾರಿ ರಸ್ತೆಗಳ ಬಣ್ಣಗಳು ಬೇರೆ ಬೇರೆ ಆಗಿರುತ್ತದೆ. "ಫೆರಾರಿವೆಲ್ಡ್" ಎಂಬುವುದು ವಿವಿಧ ರೀತಿಯ ಸಾಹಸಕ್ರೀಡೆ, ಮಾಲ್‌ಗಳನ್ನು ಹೊಂದಿರುವಂತಹ ಬೃಹತ್ತಾದ ಒಂದು ಸಮುಚ್ಛಯ. ಬೇರೆ ಬೇರೆ ಕ್ರೀಡೆಗಳೊಂದಿಗೆ ಟರ್ಬೋ ಕಂಪೆನಿಯವರ ಕಾರ್ ರೇಸ್ ಟಾಕೀಸಿನ ಮತ್ತು ಟರ್ಬೋ ಟ್ರ್ಯಾಕ್ ಸಾಹಸಮಯ ಕ್ರೀಡೆಯ ನಮ್ಮ ಅನುಭವಗಳು ನಿಜಕ್ಕೂ ರೋಮಾಂಚನವಾಗಿವೆ. ಕಾರ್ ರೇಸ್ ನೋಡುತ್ತಿದ್ದಂತೆ ನಾವು ಕುಳಿತ ಸೀಟ್ ಕೂಡ ಅದಕ್ಕೆ ಸರಿಯಾಗಿ ಬದಲಾವಣೆಯಾಗುತ್ತಾ ಹೋಗುತ್ತದೆ. ಅಪಾಯದ ವಲಯಗಳಲ್ಲಿ ಕೆಲವೊಮ್ಮೆ ಭಯ ಉಂಟಾಗುತ್ತಾದರೂ ನಾವು ಕೂತಲ್ಲೇ ಸುರಕ್ಷಿತವಾಗಿರುತ್ತೇವೆ. ಟರ್ಬೋ ಟ್ರ್ಯಾಕ್ ಕ್ರೀಡೆಯಲ್ಲಿ ನಮ್ಮೆಲ್ಲಾ ಬೆಲೆಬಾಳುವ ವಸ್ತುಗಳನ್ನು ಲಾಕರ್‌ನಲ್ಲಿ ಇಟ್ಟು, ಸರಿಯಾದ ಸುರಕ್ಷಿತಾ ಕ್ರಮಗಳನ್ನು ಅಳವಡಿಸಿ ಅತ್ಯಂತ ವೇಗದ ಅಯಸ್ಕಾಂತದ ಇಲೆಕ್ಟ್ರಾನಿಕ್ ರೋಲರ್ ಕೋಸ್ಟರ್‌ನಲ್ಲಿ ಅತ್ಯಂತ ಎತ್ತರಕ್ಕೆ ಚಲಿಸಿ ಕೆಲವೇ ಸೆಕೆಂಡುಗಳಲ್ಲಿ ವಾಪಾಸಾಗುವ ಒಂದು ಅದ್ಭುತ ಕ್ರೀಡೆ, ಇದರಲ್ಲಿ ಭಾಗವಹಿಸಿದ ಬಳಿಕ ನಾನು ಯಾತಕ್ಕೆ ಇಂತಹ ಅಪಾಯದ, ಭಯಹುಟ್ಟಿಸುವ ಕ್ರೀಡೆಗೆ ಹೋದೆನೆಂದು ನನಗೆ ಅನಿಸಿದರೂ, ಇದೊಂದು ಮರೆಯಲಾಗದ ಸಾಹಸ ಕ್ರೀಡೆಯಾಗಿದೆ.

ಹಾಗೆಯೇ ಇಲ್ಲಿನ ಮಾಲೊಂದರಲ್ಲಿ ಉದ್ಯೋಗದಲ್ಲಿದ್ದ ಪಿಲಿಪಿಯನ್ ದೇಶದ ಒಬ್ಬಾಕೆ ನನ್ನ ಪರಿಚಯ ಮಾಡಿಕೊಂಡಳು. ಆಕೆ ಪ್ರಾಥಮಿಕ ಶಿಕ್ಷಣ ವಿಷಯದಲ್ಲಿ ಪದವೀಧರೆಯಾಗಿದ್ದು (Bachelor of Primary Education) ಪಿಲಿಪೈನ್ಸ್‌ನಲ್ಲಿ ಕೆಲಕಾಲ ಶಿಕ್ಷಕಿಯಾಗಿ ದುಡಿದು ಬಳಿಕ ಇಲ್ಲಿನ ಉದ್ಯೋಗ ಸೇರಿದ್ದಳು. ನಾನೂ ಉನ್ನತ ಶಿಕ್ಷಣ ವಿಭಾಗದಲ್ಲಿ ಉದ್ಯೋಗಿಯಾಗಿದ್ದೆ ಎಂದು ತಿಳಿದು ಅನೇಕ ಶೈಕ್ಷಣಿಕ ವಿಚಾರಗಳನ್ನು ನನ್ನೊಡನೆ ಹಂಚಿಕೊಂಡಳು. ತಾನು ಪುನಃ ತನ್ನ ದೇಶಕ್ಕೆ ಮರಳಿ ಶಿಕ್ಷಕಿಯಾಗಿಯೇ ಉದ್ಯೋಗ ಮುಂದುವರಿಸುವ ಆಕಾಂಕ್ಷೆಯನ್ನು ವ್ಯಕ್ತಪಡಿಸಿದಳು. ನಾನು ನಿವೃತ್ತಿ ಹೊಂದಿದವನೆಂದು ಹೇಳಿದಾಗ ಆಕೆ ನಂಬಲಿಲ್ಲ. ಅಲ್ಲದೆ ನೀವು 60ನೇ ಪ್ರಾಯದಲ್ಲೇ ಯಾಕೆ ನಿವೃತ್ತಿಯಾಗಬೇಕು? ನಿಮ್ಮ ದೇಶ ನಿಮ್ಮ ಜ್ಞಾನ ಮತ್ತು ಕುಶಲತೆಗಳನ್ನು ಯಾಕೆ ಉಪಯೋಗಿಸುತ್ತಿಲ್ಲ? ಎಂಬಿತ್ಯಾದಿ ಆಕೆಯ ಪ್ರಶ್ನೆಗಳಿಗೆ ನಾನು ಉತ್ತರಿಸಬೇಕಾಯಿತು.

ಅಬುದಾಬಿಯಲ್ಲಿ ನೋಡಲೇಬೇಕಾಗಿರುವ ಇನ್ನೊಂದು ಪ್ರೇಕ್ಷಣೀಯ ಸ್ಥಳವೆಂದರೆ ಜಗತ್ತಿನ ಕೆಲವೇ ಅತ್ಯಂತ ದೊಡ್ಡದಾದ ಮತ್ತು ಅತೀ ಸುಂದರವಾದ ಮಸೀದಿಗಳಲ್ಲೊಂದಾದ "ಶೇಖ್ ಝುಯಿದ್ ಗ್ರ್ಯಾಂಡ್ ಮಸೀದಿ". ಇದು ಯುಎಇ ದೇಶದ ಹಿಂದೆ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಆಳಿದ ರಾಜ ಅಮೀರ್ ಶೇಖ್ ಝುಯಿದ್ ಅಲ್ ನಹ್ಯಾನ್ ಅವರ ಹೆಸರಿನ ಮಸೀದಿಯಾಗಿದ್ದು, ಅವರ ಹೆಸರಿನಲ್ಲಿಯೇ ಇರುವ ದುಬ್ಯಾ–ಅಬುದಾಬಿ ರಸ್ತೆಯ ಪಕ್ಕದಲ್ಲಿದೆ. ಈ ಮಸೀದಿಯನ್ನು 545 ಮಿಲಿಯ ಡಾಲರ್ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಮಸೀದಿಯ ವಿಶೇಷವೆಂದರೆ, ಇದು ಏಳು ವಿಭಿನ್ನ ಗಾತ್ರದ 82 ಗುಮ್ಮಟಗಳನ್ನು ಹೊಂದಿದ, ವಿಭಿನ್ನ ವಿನ್ಯಾಸ, ವಾಸ್ತುಶಿಲ್ಪಗಳಿಂದ ಸುಂದರಗೊಳಿಸಿದ ಒಂದು ಅಪೂರ್ವ ಮಸೀದಿಯಾಗಿದೆ. ಮಸೀದಿಯ ಮಧ್ಯೆ ಅತಿ ಪವಿತ್ರ ಅಂಗಣಗಳಲ್ಲಿ ಚೆನ್ನದ ದೀಪಾಲಂಕಾರಗಳನ್ನು ನೇತಾಡಿಸಿದ್ದಾರೆ. ಮಸೀದಿಯ ಆವರಣದಲ್ಲಿ ಸುಸಜ್ಜಿತವಾದ ಪಾರ್ಕಿಂಗ್, ಶೌಚಾಲಯ, ರೆಸ್ಟೋರೆಂಟ್ ವ್ಯವಸ್ಥೆ ಮಾಡಲಾಗಿದೆ. ಇಲ್ಲಿನ ಪ್ರವೇಶಕ್ಕೆ ಪುರುಷರಿಗಿಂತ ಹೆಚ್ಚು ಮಹಿಳೆಯರೇ ಕೆಲವು ವಸ್ತ್ರಸಂಹಿತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ.

ನಮ್ಮ ಮುಂದಿನ ವೀಕ್ಷಣೆಯು ದುಬ್ಯಾಯ ಇನ್ನೊಂದು ಅದ್ಭುತ ಆಕರ್ಷಣೆ "ಮಿರೆಕಲ್ ಗಾರ್ಡನ್" ಎನ್ನುವ ಒಂದು ಹೂವಿನ ಉದ್ಯಾನ. ಇದು ಇತ್ತೀಚಿನ ಎಂದರೆ ಸುಮಾರು 2015ರ ನಂತರ ಪ್ರಾರಂಭಗೊಂಡ ಒಂದು ಪ್ರವಾಸಿ ಆಕರ್ಷಣೆಯ ಸ್ಥಳ. ಹೆಸರೇ ಸೂಚಿಸುವಂತೆ "ಮಿರೆಕಲ್ ಗಾರ್ಡನ್" ನಿಜ ಅರ್ಥದಲ್ಲೂ ಒಂದು ವಿಸ್ಮಯವೇ. ಇದೊಂದು ಅತ್ಯಂತ ಅಪೂರ್ವ ಹೂವುಗಳ ಉದ್ಯಾನವಾಗಿದ್ದು ಅವುಗಳನ್ನು ಸಂಪೂರ್ಣವಾಗಿ ಸುತ್ತುವರಿಯಲು ನಮ್ಮ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವಂತೆ ಬ್ಯಾಟರಿ ಕಾರುಗಳೂ ಸೇವೆಯಲ್ಲಿರುತ್ತವೆ. ಸಮಯವಿದ್ದರೆ ನಡಿಗೆಯಿಂದಲೇ ನೋಡಿ ಅನುಭವಿಸಿ ಪಡೆಯುವ ಸಂತೋಷವೇ ಹೆಚ್ಚು. ಗಿಡ–ಹೂವುಗಳಿಂದಲೇ ರಚಿಸಿದ ಪ್ರಾಣಿ ಪಕ್ಷಿಗಳ ಆಕೃತಿಗಳನ್ನು ಇಲ್ಲಿ ನೋಡಬಹುದು. ಹೂವುಗಳಿಂದಲೇ ರಚಿಸಿ ಅಲಂಕರಿಸಿದ ಎಮಿರಿಟಸ್ ವಿಮಾನದ ಆಕೃತಿಯೂ ಮತ್ತು ಮೋಟಾರುಕಾರು, ಈ ಎರಡು ಇಲ್ಲಿನ ಆಕರ್ಷಣೀಯ ಪ್ರದರ್ಶನಗಳಾಗಿವೆ. ಈ ಎಲ್ಲಾ ಹೂಗಿಡಗಳ ಪೋಷಣೆಗೆ ಅಲ್ಪಕಾಲ ಸುರಿಯುವ ಮಳೆಯ ನೀರಿನ ಶೇಖರಣೆಯೂ (Rain Water Harvesting) ಈ ಉದ್ಯಾನದ ಪೋಷಣೆಗೆ ಉಪಯೋಗಿಸಲಾಗುತದೆ. ಕೆಲವು ಮಾರಾಟ ಮಳಿಗೆಗಳೊಂದಿಗೆ ಉಪಾಹಾರ ಗೃಹ, ಶೌಚಾಲಯ, ಪಾರ್ಕಿಂಗ್ ಎಲ್ಲವೂ ಅಚ್ಚುಕಟ್ಟಾಗಿ ಇಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ದುಬ್ಯಾಯ ಇನ್ನೊಂದು ಆನಂದ ನೀಡುವ ಪ್ರವಾಸಿ ಸ್ಥಳವೆಂದರೆ "ಗ್ಲೋಬಲ್ ವಿಲೇಜ್". ಇದೊಂದು ಬೃಹತ್ತಾದ ವ್ಯಾಪಾರ ಮಳಿಗೆಗಳ ಕೇಂದ್ರ. ಇಲ್ಲಿ ವಿವಿಧ ದೇಶಗಳ ಸಂಸ್ಕೃತಿಗಳನ್ನು ಬಿಂಬಿಸುವ ವಸ್ತುಪ್ರದರ್ಶನಗಳು ಮತ್ತು ವ್ಯಾಪಾರ ಮಳಿಗೆಗಳನ್ನು ನೋಡಬಹುದು. ಇದೊಂದು ಪ್ರತಿದಿನ ಇರುವ ಉತ್ಸವದಂತೆ, ಇಲ್ಲಿ ಹಬ್ಬದ ವಾತಾವರಣದಲ್ಲಿ ಸುತ್ತಾಡುವ ಅನುಭವವಾಗುತ್ತದೆ. ಅಲ್ಲದೆ ಇಲ್ಲೇ ಇದ್ದುಕೊಂಡು ಬೇರೆ ಬೇರೆ ದೇಶಗಳನ್ನು ಸುತ್ತಿಬರುವ ಅನುಭವವಾಗುತ್ತದೆ. ಇಲ್ಲಿನ ಎಲ್ಲಾ ದೇಶಗಳ ಮಳಿಗೆಗಳನ್ನು ನೋಡಬೇಕಾದರೆ ಸುಮಾರು ಅರ್ಧ ದಿವಸವೇ ಬೇಕಾದೀತು. ಗ್ಲೋಬಲ್ ವಿಲೇಜ್‌ನ ಮಧ್ಯೆ ಒಂದು ಕಾಲುವೆ ಇದ್ದು ದೋಣಿ ವಿಹಾರದ ವ್ಯವಸ್ಥೆಯನ್ನು ಮಾಡಲಾಗಿದೆ.

ದುಬ್ಯಾ ಮತ್ತು ಅಬುದಾಬಿಗಳ ಈ ಎಲ್ಲಾ ಪ್ರವಾಸಿತಾಣಗಳನ್ನು ಕ್ರಮಿಸಿದ ಬಳಿಕ ಜನವರಿ 24ರಂದು, ನಮಗೆ ಶಾಪಿಂಗ್‌ಗೋಸ್ಕರ ದುಬ್ಯಾಯ ಪ್ರಸಿದ್ಧ ಮೀನಾ ಮಾರ್ಕೆಟ್‌ನಲ್ಲಿ ಸುಮಾರು ಒಂದು ಹೊತ್ತು ಕಾಲ ಕಳೆಯುವ ಅವಕಾಶವಿತ್ತು. ಮೀನಾ ಮಾರ್ಕೆಟ್‌ನಲ್ಲಿ ವಿವಿಧ ಬಗೆಯ ಮತ್ತು ವಿವಿಧ ದೇಶಗಳ ಶಾಪಿಂಗ್ ಸಾಮಾಗ್ರಿಗಳು ಲಭ್ಯವಿರುತ್ತವೆ. ಒಂದು ದಿರಾಮ್‌ನಿಂದ 10 ದಿರಾಮ್‌ವರೆಗಿನ, 30 ದಿರಾಮ್‌ವರೆಗಿನ ಬೆಲೆಗಳ ವಸ್ತುಗಳ ಮಾರಾಟ ಕೇಂದ್ರಗಳು, ಮಳಿಗೆಗಳು ಇಲ್ಲಿ ಕಾಣಬಹುದು. ಭಾರತೀಯ ಮೂಲದ ಚಿನ್ನದ ಉದ್ಯಮಗಳ ಶಾಖೆಗಳು ಇಲ್ಲಿವೆ. ಸಂಜೆಯ ನಂತರ ಭಾರತೀಯ ಹೋಟೆಲೊಂದರಲ್ಲಿ ಬಫೆ ಊಟ ಪೂರೈಸಿ ಭಾರತಕ್ಕೆ ಹಿಂದಿರುಗಲು ವಿಮಾನ ನಿಲ್ದಾಣಕ್ಕೆ ಬಂದ ನಮಗೆ ಅಲ್ಲಿಯು ಶಾಪಿಂಗ್‌ಗಾಗಿ ಸಾಕಷ್ಟು ಸಮಯ ಒದಗಿಸಲಾಗಿತ್ತು. ರಾತ್ರಿ 11.40ಕ್ಕೆ ನಿಗದಿಯಾಗಿದ್ದ ನಮ್ಮ ವಿಮಾನ ಸರಿಯಾದ ಸಮಯಕ್ಕೆ ಟೇಕ್‌ಆಫ್ ಆಗಿತ್ತು. ದುಬ್ಯಾನಲ್ಲಿನ ಇಮಿಗ್ರೇಶನ್ ಪ್ರಕ್ರಿಯೆಯ ಸಂದರ್ಭ ಓರ್ವ ನೀಗ್ರೋ ಮಹಿಳಾ ಅಧಿಕಾರಿಣಿಯು ನನ್ನ ಸರದಿ ಬಂದಾಗ, ಆಕೆ ನನ್ನ ಪಾಸ್‌ಪೋರ್ಟ್‌ನ ಈ ಹಿಂದಿನ ಜಪಾನ್ ವೀಸಾ ಪುಟದ ಮೇಲೆಯೇ ಇಮಿಗ್ರೇಶನ್ ಮೊಹರನ್ನು ಹಾಕಿದ್ದು, ಇದು ಆಕೆಯ ಅಜಾಗರುಕತೆಯನ್ನು ಮಾತ್ರ ತೋರಿಸುವುದಲ್ಲದೆ, ಈ ಎಲ್ಲಾ ಕಾರ್ಯಗಳು ಹೇಗೆ ಯಾಂತ್ರಿಕವಾಗಿ ಮತ್ತು ಅವೈಯುಕ್ತಿಕವಾಗಿ ನಡೆಯುತ್ತಿರುತದೆ ಎಂಬುದನ್ನು ಸೂಚಿಸುತದೆ. ಮರುದಿವಸ ಮಂಗಳೂರು ವಿಮಾನ ನಿಲ್ದಾಣಕ್ಕೂ ಬೆಳಿಗ್ಗೆ 4–45 ನಿಗದಿತ ಸಮಯಕ್ಕೆ ವಿಮಾನ ಲ್ಯಾಂಡಿಂಗ್ ಆಗಿತ್ತು. ಕಸ್ಟಮ್ ಮತ್ತು ಭದ್ರತಾ ಪ್ರಕ್ರಿಯೆಗಳ ನಿಧಾನಗತಿಯ ಔಪಚಾರಿಕತೆಗಳಿಂದಾಗಿ ವಿಮಾನ ನಿಲ್ದಾಣದಿಂದ ನಿರ್ಗಮಿಸುವ ಸಮಯ ಸ್ವಲ್ಪ ವಿಳಂಬವಾದರೂ ಪ್ರವಾಸವನ್ನು ಸುರಕ್ಷಿತವಾಗಿ, ಅಚ್ಚುಕಟ್ಟಾಗಿ ಮತ್ತು ಯಶಸ್ವಿಯಾಗಿ ಸಂಘಟಿಸಿದ ಕೀರ್ತಿ ರಿಯಾ ಟ್ರಾವೆಲ್ಸ್‌ಗೆ ಸಲ್ಲುತ್ತದೆ.

# ಹೀಗೊಂದು ಗುರುಶಿಷ್ಯ ಸಂವಾದ

–ಅಪಯಶ, ಬೆಂಗಳೂರು

ಅಪಯಶ ಶರ್ಮರೆಂದೇ ಖ್ಯಾತರಾದ ಎ.ಪಿ.ಯಶವಂತ ಶರ್ಮರವರು ಅಧುನಿಕ ಜೀವನದ ಬವಣೆಗಳಿಂದ ನೊಂದು ಗೊಂದಲಕ್ಕೊಳಗಾದ ಶಿಷ್ಯನ ಸಂಶಯಗಳನ್ನು ಗುರುಗಳು ಪರಿಹರಿಸುವುದನ್ನು ಸಂವಾದದ ರೂಪದಲ್ಲಿ ಬರೆದ ಕೃತಿ ಇದು. ಪ್ರತಿ ತಿಂಗಳು ಭಾಗ ರೂಪದಲ್ಲಿ ಪ್ರಕಟವಾಗಲಿದೆ.

**ಗುರುದರ್ಶನ :**

1) ಏನಯ್ಯ ಅಪಯಶನೆ, ಏನಿದು ನಿನ್ನ ಗೋಳಾಟ ?
ಏಕಯ್ಯ ಏನಾಯ್ತು ? ಏನಿದು ಪೀಕಲಾಟ ?
ತಲೆ ಮೇಲೆ ಕೈಯಿಟ್ಟು ಕುಳಿತಿರುವೆ ಯೇಕಯ್ಯ ?
ಲೋಕದ ಕಷ್ಟನಷ್ಟಗಳ, ನೀನೆ ಹೊತ್ತಿರುವೆ ಯೇನಯ್ಯ ?

2) ಮಡದಿಯೊಡನೆ ಜಗಳಾಡಿ, ತವರಿಗೆ ಕಳೀಸಿರುವೆ ಯೇನಯ್ಯ ?
ಒಡಲಿಗೆ ಅನ್ನ ಬೀಳದೆ, ದಿನಗಳೆಷ್ಟಾಯ್ತು ಹೇಳಯ್ಯ ?
ಹೋಟೆಲಿನ ಊಟ, ಹೊಟ್ಟೆಗೆ ಒಳ್ಳೆಯದಲ್ಲವಯ್ಯ
ಬಾಟಲಿನ ಒಡನಾಟ ಮಾಡಿದೆಯೋ ? "ಕೆಟ್ಟೆ" ನೀನಯ್ಯ

3) ಸರಿಯಾಗಿ ಊಹಿಸಿದರೆ ನೀವು, ಭೆಟ್ಟಿಯಾದವ ವಾಸುಭಟ್ಟ !
ಗುರುವೆಂಬ ಸಲಿಗೆಯಲಿ, ನಾಲಿಗೆ ಹರಿಯ ಬಿಟ್ಟ.
ದುರುಗುಟ್ಟಿ ನೋಡಲು ನಾನು, "ಸೋರಿ" ಎಂದು ಬಿಟ್ಟ
ಮರುಕ್ಷಣವೊಂದು ದೇಶಾವರಿಯ, ನಗೆ ನಕ್ಕು ಬಿಟ್ಟ.

4) ಕಚೇರಿಯ ಹಿರಿಯ ಒಡನಾಡಿ, ಪಡುಬಿದಿರೆ ವಾಸುಭಟ್ಟ,
ವೈದಿಕ ವೃತ್ತಿ ಬಲ್ಲವನು ಶಾಸ್ತ್ರಗಳನೆಲ್ಲ ತಿಳಿದವನು
ನನ್ನಂಥ ಪಾಮರ ಅವನ, "ಗುರು" ವೆಂದು ಕರೆದಿರಲು
ಗರುವದಲಿ ಭಟ್ಟಾಚಾರ್ಯ, ಉಪದೇಶವ ಮಾಡಿ ಬಿಟ್ಟ !

(ಮುಂದುವರೆಯುವುದು...)

# ಶವಾಸನ (ಹಾಸ್ಯಮಿಶ್ರಿತ ಲೇಖನ)

ಲೇಖಕ : ಜಿ.ಕೆ.ಕೋಲ್ಪೆ

ಲಘು ದೈಹಿಕ ವ್ಯಾಯಾಮದೊಂದಿಗೆ ಯೋಗಾಸನ–ಪ್ರಾಣಾಯಾಮ, ಮುಖ್ಯವಾಗಿ ವಿಶ್ರಾಂತ ಜೀವನದಲ್ಲಿ ದೇಹದ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಬಹಳ ಅಗತ್ಯ. ಬೆಳಗ್ಗೆ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಕನಿಷ್ಠ ಒಂದು ತಾಸು ಈ ಕಸರತ್ತು ನಡೆಸದಿದ್ದರೆ ನನಗಂತೂ ಏನೋ ಕಳಕೊಂಡ ಅನುಭವ. ಯೋಗಾಂತ್ಯದಲ್ಲಿ "ಶವಾಸನ" ಬಹಳ ಮಹತ್ವದ್ದಾಗಿದೆ. ಅಂಗಾತ ಮಲಗಿ ದೇಹದ ವಿವಿಧ ಭಾಗಗಳಿಗೆ ವಿಶ್ರಾಂತಿ ಕೊಡುವ ಪ್ರಕ್ರಿಯೆಯನ್ನು ಕಾಲಿನ ಬೆರಳುಗಳಿಂದ ಮೊದಲ್ಗೊಂಡು ತಲೆಬುರುಡೆಯ ಮಸ್ತಿಷ್ಕ ತನಕ ಮಾನಸಿಕವಾಗಿ ಆಜ್ಞೆ ಕೊಡುತ್ತಾ ಅಂತಿಮವಾಗಿ "ಅಡಿಯಿಂದ ಮುಡಿ" ಯವರೆಗೆ – ಮುಡಿಯಿಂದ ಅಡಿಯವರೆಗೆ' ದೇಹದ ಎಲ್ಲಾ ಭಾಗಗಳು ವಿಶ್ರಾಂತಿ ಅನುಭವಿಸಲಿ ಎನ್ನತ್ತಾ 'ಶವಾಸನ' ಸ್ಥಿತಿಗೆ ತಲುಪಿ ಮಹದಾನಂದದ ಅನುಭವ ಪಡೆಯುವುದೇ ಆಪ್ಯಾಯಮಾನ. ಕನಿಷ್ಠ 5–10 ನಿಮಿಷ ವಿಶ್ರಾಂತಿ ಅನುಭವಿಸಿ ಪುನಃ ಯಥಾಸ್ಥಿತಿಗೆ ಬಂದು ನಿಧಾನವಾಗಿ ಮೇಲೆದ್ದರೆ 'ಯೋಗಾಸನ' ಮುಗಿದಂತೆ. ಇದು ಎಲ್ಲಾ ಯೋಗ ತರಬೇತಿ ಶಿಬಿರಗಳಲ್ಲಿ ಅನಿವಾರ್ಯ ಪ್ರಕ್ರಿಯೆ.

ಇನ್ನು ನನ್ನ ನೆನಪಿನಂಗಳಕ್ಕೆ ಜಾರುತ್ತಾ, ಕೆಲವು ದಿನಗಳ ಹಿಂದೆ, ಖಗ್ರಾಸ ರಕ್ತಚಂದ್ರ ಗ್ರಹಣದ ಬಗ್ಗೆ ಎಲ್ಲಾ ಮಾಧ್ಯಮಗಳು ಜ್ಯೋತಿಷಿಗಳನ್ನು ಮುಂದಿಟ್ಟುಕೊಂಡು 27 ನಕ್ಷತ್ರ 12 ರಾಶಿಯವರ ಜಾತಕ ಜಾಲಾಡಿ, ದೇಶ–ರಾಜ್ಯದ ಭವಿಷ್ಯವನ್ನು "ವೈಭವೀಕರಿಸಿ" ಅಲ್ಲೋಲ ಕಲ್ಲೋಲಗೊಳಿಸಿದ್ದು ಎಲ್ಲರಿಗೂ ತಿಳಿದದ್ದೆ. ಕೆಟ್ಟ ಪರಿಣಾಮ ಬೀರುವ ನಕ್ಷತ್ರಗಳಲ್ಲಿ ನಾನೂಇದ್ದೆ. ಅಲ್ಲದೆ ನನ್ನ ಮಗನ ಭವಿಷ್ಯ ಉತ್ತಮವಾಗಿದ್ದರೂ "ಪಿತೃವರ್ಗಕ್ಕೆ ಕಂಟಕ" ವೆಂದು ಹೇಳಿದ್ದು ಮನಸ್ಸಿನಲ್ಲಿ ಕೊರೆಯುತಿತ್ತು. ಪರಿಹಾರವಾಗಿ ವಿವಿಧ ಪಾರಾಯಣಗಳು, ಪೂಜಾದಿ–ಶಾಂತಿಗಳು ನಡೆದರೆ "ತೊಂದರೆ ನಿವಾರಣೆ" ಎಂಬ ಸಲಹೆ ಕೇಳಿ ಸ್ವಲ್ಪ ಸಮಾಧಾನವಾಯ್ತು. ಇದೇ ಗುಂಗಿನಲ್ಲಿ, ಅದೊಂದು ಬ್ರಾಹ್ಮೀ ಮುಹೂರ್ತದಲ್ಲಿ ಯೋಗಾಸನ ಮಾಡುತ್ತಾ ಅಂತಿಮ ಪ್ರಕ್ರಿಯೆಯಾದ "ಶವಾಸನ"ದಲ್ಲಿ ದೇಹದ ಭಾಗಗಳಿಗೆ ನಿರ್ದೇಶನ ಕೊಡುತ್ತಾ," ಎಡವಟ್ಟಾಗಿ" ಎದೆಯ ಬದಲು "ಶ್ವಾಸಕೋಶ" ಗಳಿಗೆ ವಿಶ್ರಾಂತಿ ಪಡೆಯಲು ಆದೇಶಿಸಿದ್ದೇ ತಡ ನನ್ನ ಉಸಿರು ಅನಂತದಲ್ಲಿ ಲೀನವಾಗಿ ನಾನು ಇಹಲೋಕದಿಂದ ಹೊರಟೇಬಿಟ್ಟೆ ! ಆಹಾ ! ಎಂತಹ ಸುಂದರ ವಾತಾವರಣ ! ಹಕ್ಕಿಯಂತೆ ಹಾರುತ್ತಾ ಆಗಸಕ್ಕೇರಿ ಸಂಭ್ರಮಿಸುತ್ತಿರುವಾಗ, ನನ್ನವಳ ಆಕ್ರಂದನ ಕೇಳಿದಂತಾಗಿ ಆತಂಕಪಟ್ಟೆ ! "ನನ್ನನ್ನು ಬಿಟ್ಟು ಹೋದಿರಾ? ನಿಮಗಿಂತ ಮೊದಲೇ ಮುತ್ತೈದೆಯಾಗಿ ಚಿರಶಾಂತಿ ಪಡೆಯಬೇಕೆಂದಿದ್ದೆ ! ನನ್ನನ್ನೂ ಕರಕೊಂಡು ಹೋಗಿ" ಎಂದು ಹೇಳುತ್ತಾ ನನ್ನೆದೆಗೆ "ಅಕ್ಕಿ ರೊಟ್ಟಿ ತಟ್ಟುವಂತೆ" ತಟ್ಟಿದಾಗ ಬೆಚ್ಚಿಬಿದ್ದು ಜಗ್ಗನೇ ಎದ್ದೇ ಬಿಟ್ಟೆ ಸುಂದರ ಸ್ವಪ್ನದಿಂದ ವಾಸ್ತವಕ್ಕೆ ಹಿಂತಿರುಗುತ್ತಾ ಬೆಳಗ್ಗೆ ಬಿದ್ದ ಕನಸು ನನಸಾಗಲಿ ! ಎಂದು ಭಗವಂತನಲ್ಲಿ ಬೇಡಿಕೊಂಡು, ಈ ವಿಷಯ ನನ್ನವಳಿಗೆ ಭಿನ್ನವಿಸಿದೆ. "ನಿಮ್ಮ ನಾಟಕ ಸಾಕು ಮಾರಾಯ್ರೆ, ಬೇಗ ಸ್ನಾನ ಮಾಡಿ ಪೂಜೆ ಮುಗಿಸಿ " ಎಂದಳು. ಯಾರದ್ದು? ನಿನ್ನದೋ ಅಥವಾ ದೇವರದ್ದೋ? ಎಂದಾಗ ಈ ಇಳಿವಯಸ್ಸಲ್ಲೂ ನನ್ನ ಕುಹಕ ಅರ್ಥೈಸಿಕೊಂಡ ಅವಳ ಮುಖಕೆಂಪೇರಿ ಹುಸಿಮುನಿಸು ಕಂಡಿತು !.

## ಶುಭ ವಿವಾಹ

ಬೆಳ್ಳೆ ಶ್ರೀ ಶ್ರೀಧರರಾವ್ ಮತ್ತು ಶ್ರೀಮತಿ ನಾಗಲಕ್ಷ್ಮೀರಾವ್‌ರ **ಪುತ್ರಿ** ಶ್ವೇತಾ ಹಾಗೂ ಬೆಳ್ಳರ್ಪಾಡಿ ಶ್ರೀ ಪದ್ಮನಾಭರಾವ್ ಮತ್ತು ಕೃಷ್ಣವೇಣಿರಾವ್ ಅವರ ಪುತ್ರ **ರಾಕೇಶ್‌**ರವರ ವಿವಾಹವು ತಾ.17.06.2018ರಂದು ಎರ್ಮಾಳಿನ ಶ್ರೀ ಜನಾರ್ಧನ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ನೂತನ ವಿಳಾಸ

**U.V.RAO**
604/605,Hara Vijaya Heights,Tower 2, Pipe Line Road, Off Kanakapura Road, Near Nice Road Junction, Bengalur 560 062. Mobile : 9324233430

**** ****

**CA. NAGARAJ SHARMA**
ìSHARMAî, Mundaana 1st Cross, Near Naganakatte, Kadrikambla Road, Bejai, Mangalore-575004

## ನಿಧನ

ವಿರಾಜಪೇಟೆಯಲ್ಲಿ ವಾಸ್ತವ್ಯವಿದ್ದ ಶ್ರೀ ಎನ್.ಶಿವರಾಯರ ಪುತ್ರ ಶ್ರೀ ಎನ್.ಎಸ್.ಪ್ರಕಾಶ್‌ರವರು ತನ್ನ 66ನೇ ವಯಸ್ಸಿನಲ್ಲಿ ತಾ.03-07-2018ರಂದು ನಿಧನ ಹೊಂದಿದರು.

**** ****

ಮುಂಬಯಿ ನಿವಾಸಿ ದಿ। ಎನ್.ಭವಾನಿಶಂಕರ ರಾವ್ ಹಾಗೂ ರತ್ನಾಬಾಯಿ ಒಳಕಾಡು ರವರ ಪುತ್ರಿ ಶ್ರೀಮತಿ ಜ್ಯೋತ್ಸ್ನಾ ಡಿ. ರಾವ್ (ಶ್ರೀ ಬಿ. ದಿವಾಕರ ರಾವ್‌ರವರ ಪತ್ನಿ)ರವರು ತಾ.12-07-2018ರಂದು ತನ್ನ 62ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

## ಬ್ರಹ್ಮೋಪದೇಶ

ಬೆಂಗಳೂರು : ಶ್ರೀಮತಿ ಮಾಲತಿ ಮತ್ತು ಶ್ರೀ ಪಿ. ಸುಬ್ರಹ್ಮಣ್ಯರಾವ್ ಹಾಗೂ ಶ್ರೀಮತಿ ಶಾಂಭವಿ ಮತ್ತು ಎಂ.ರಮಾನಂದರಾಯರ ಪೌತ್ರ, ಶ್ರೀಮತಿ ಶಿಲ್ಪಾ ಮತ್ತು ಶ್ರೀ ಸಲೀಲ್ ರಾವ್ (ಯು.ಎಸ್.ಎ) ರವರ ಸುಪುತ್ರ ಚಿ। ಸಿದ್ಧಾಂತನ ಬ್ರಹ್ಮೋಪದೇಶ ಸಮಾರಂಭವು ದಿನಾಂಕ 18.06.2018 ರಂದು ಬೆಂಗಳೂರಿನ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಸನ್ನಿಧಿಯ ಶ್ರೀ ಜ್ಞಾನಶಕ್ತಿ ಮಂಟಪದಲ್ಲಿ ನೆರವೇರಿತು.

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಯಕ್ಷಗಾನ



ದಿನಾಂಕ 10-07-2018ರಂದು ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ಶ್ರೀ ಪಾಂಚಜನ್ಯ ಯಕ್ಷಗಾನ ಕಲಾತಂಡ (ರಿ) ನೇರಳಕಟ್ಟೆ ಮತ್ತು ಶ್ರೀ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ (ರಿ) ಕಾಸರಗೋಡು ಇವರಿಂದ ಶ್ರೀ ಕ್ಷೇತ್ರದ ವಠಾರದಲ್ಲಿ "ಮಹಿಷಮರ್ದಿನಿ" ಎಂಬ ಪೌರಾಣಿಕ ಯಕ್ಷಗಾನ ಬಯಲಾಟ ಪ್ರದರ್ಶನ ಜರಗಿತು. ಹನುಮಗಿರಿ ಯಕ್ಷಗಾನ ಮೇಳದ ವ್ಯವಸಾಯಿ ಕಲಾವಿದರಿಂದ ಶ್ರೀ ಜಗದಾಭಿರಾಮ ಸ್ವಾಮಿಯವರು ಮಹಿಷಸುರರಾಗಿ ಒಳ್ಳೆಯದಾಗಿ ಅಭಿನಯಿಸಿ ನೆರೆದಿದ್ದ ಜನರನ್ನು ಆಕರ್ಷಿಸಿದರು. ಅವರ ಮಕ್ಕಳು ಯಕ್ಷಗಾನದಲ್ಲಿ ವೇಷದಾರಿಗಳಾಗಿ ಅಭಿನಯಿಸಿದ್ದು ವಿಶೇಷವಾಗಿತ್ತು.

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು

ಭಕ್ತಾಭಿಮಾನಿಗಳೇ,

ಇದೇ ಬರುವ **ದಿನಾಂಕ 17.8.2018ನೇ ಶುಕ್ರವಾರ ಸೋಣ ಸಂಕ್ರಮಣದಿಂದ ಮೊದಲ್ಗೊಂಡು** ಒಂದು ತಿಂಗಳ ಕಾಲ ಅಂದರೆ **17-09-2018 ಸೋಮವಾರದ ವರೆಗೆ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ**

### 'ಸೋಣಾರತಿ-ಹೂವಿನ ಪೂಜೆ'

ದೇವಳದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ನಡೆಯಲಿದ್ದು, ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಪೂಜೆ ಮಾಡಿಸುವವರು ಬರುವಾಗ ಹೂ, ಹಣ್ಣು ಕಾಯಿ ಮತ್ತು ಒಂದು ಪೂಜೆಗೆ ರೂ.300 ರಂತೆ ತೆರಬೇಕು. ಪೂಜೆಯ ಸಮಯ ಪ್ರತಿದಿನ ರಾತ್ರಿ 6.30ರಿಂದ 7.30ವರೆಗೆ**

ಸೇವೆ ಮಾಡಿಸುವವರು ಈ ಕೆಳಗಿನ ಮೊಬೈಲ್ ನಂಬರ್‌ಗಳನ್ನು ಸಂಪರ್ಕಿಸಿ :
**ದಿವಾಕರ ರಾವ್ : 9902169119 ; ವಿಜಯ ದೇವರಾಯ ಶರ್ಮ : 8970485179**
**ಸುಧಾಕರ ಬೆಳ್ಳೆ : 9845193103; ಬಿ. ಜಯರಾಮ್ ರಾವ್ : 9844545040**

**- ಆಡಳಿತ ಮಂಡಳಿ**

ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು
ಬ್ಯಾಂಕಿನ ವಿವರ : **ಬ್ಯಾಂಕ್ ಖಾತೆ ನಂಬರ್ 01382200051328**
ಬ್ಯಾಂಕ್ : **ಸಿಂಡಿಕೇಟ್ ಬ್ಯಾಂಕ್ ಖಾತೆ : ಪಡುಬಿದ್ರಿ**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ
ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.30-08-2018 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.21-08-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.31-08-2018 ಮತ್ತು ತಾ.14-09-2018 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**
ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ
ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. - ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**
ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363



ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು


**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




ಎಮ್. ದೇವಾನಂದ್ ಭಟ್ Cell : 9845644556, 9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS



**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ದೂರವಾಣಿ : 2522408

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**L.No.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ –576101.**

ತಾ. : 23-06-2018

### 2017–2018ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2017–2018ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.26–08–2018ನೇ ರವಿವಾರ ಪೂರ್ವಾಹ್ನ ಘಂಟೆ 11–00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡವಳಿಕೆಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್** — ಕಾರ್ಯದರ್ಶಿ

**ಕೆ. ವೇಣುಗೋಪಾಲ್ ರಾವ್** — ಅಧ್ಯಕ್ಷರು

**ಕಾರ್ಯಕ್ರಮ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
2. ತಾ:10-09-2017ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
3. 2017–2018ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2017–2018ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
5. 2017–2018ನೇ ಸಾಲಿನ ಅಂದಾಜು ಆಯ–ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2018–2019ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
7. 2017–2018ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
8. 2018–2019ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
9. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.

ವಿ.ಸೂ. :

1. **ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.**
2. **ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.**
3. **ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು ಕಡ್ಡಾಯವಾಗಿ 3 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 3 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.**

**ಸದಸ್ಯರು ಸಭೆಗೆ ಬರುವಾಗ ಈ ನೋಟೀಸನ್ನು / ವರದಿಯನ್ನು ತಪ್ಪದೇ ತರಬೇಕಾಗಿ ವಿನಂತಿ. ಸದಸ್ಯರಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರುತ್ತದೆ.**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋ.ಕೆ. ಸದಾಶಿವ ಶಾಸ್ತ್ರಿ, 3–68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ–575019. ಮೊ : 8762235801.**

2017–18ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯು.ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 21–10–2018 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 30–09–2018ರ ಒಳಗಡೆ ಮೇಲ್ಕಾಣಿಸಿದ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**–ಕೆ. ಸದಾಶಿವ ಶಾಸ್ತ್ರಿ**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2018-19ನೇ** ಸಾಲಿನ **ದಿ. ಡಾ.ವೈ.ಚಂದ್ರಶೇಖರರಾವ್** ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ** ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-09-2018**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**

**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**

## ಶ್ರೀಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2018-19

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ ತಾ.30-09-2018ರ ಒಳಗೆ ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ-576102 ಅರ್ಜಿಯನ್ನು ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ 2018-19

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2018-2019ನೇ** ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ನಿಗದಿತ ಅರ್ಜಿ ಫಾರಂನ್ನು** ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2018ರ** ಒಳಗೆ ತಲುಪುವಂತೆ ಕಳುಹಿಸಬೇಕು.

ವಿ.ಸೂ. : **ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2018-19

ಉಡುಪಿ ಮತ್ತು ದ.ಕ. ಜಿಲ್ಲೆಗಳ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ‍್ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿಗಳೊಂದಿಗೆ **ತಾ.30-09-2018**ರೊಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

### ಉದಯಚಂದ್ರ ಪ್ರತಿಭಾ ಪುರಸ್ಕಾರ 2018-19

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2017-18ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ಮೊದಲ ಪುಟದ ಪ್ರತಿ ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2018**ರೊಳಗೆ ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

### ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-08-2018 | ಸಿಂಹ ಸಂಕ್ರಮಣ | 02-09-2018 | ಶ್ರೀಕೃಷ್ಣ ಜಯಂತಿ ಚಂದ್ರೋದಯ ರಾತ್ರಿ 11.47 |
| 22-08-2018 | ಸರ್ವೈಕಾದಶಿ | 03-09-2018 | ಶ್ರೀಕೃಷ್ಣ ಲೀಲೋತ್ಸವ |
| 24-08-2018 | ವರಮಹಾಲಕ್ಷ್ಮೀ ವ್ರತ | 06-09-2018 | ಸರ್ವೈಕಾದಶಿ |
| 25-08-2018 | ಋಗುಪಾಕರ್ಮ | 09-09-2018 | ಅಮಾವಾಸ್ಯೆ |
| 26-08-2018 | ಯಜುರುಪಾಕರ್ಮ ನೂಲಹುಣ್ಣಿಮೆ, ರಕ್ಷಾಬಂಧನ | 10-09-2018 | ವರ್ಷ ಋತು ಭಾದ್ರಪದ ಮಾಸ ಶುಕ್ಲಪಕ್ಷಾರಂಭ |
| 27-08-2018 | ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷಾರಂಭ | 11-09-2018 | ಸಾಮೋಪಾಕರ್ಮ |
| | | 12-09-2018 | ಗೌರಿತೃತೀಯಾ |
| 30-08-2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.31 | 13-09-2018 | ಗಣೇಶ ಚತುರ್ಥಿ |
| | | 17-09-2018 | ಕನ್ಯಾ ಸಂಕ್ರಮಣ |

## ಕಾರ್ಕಳ ಸಂಘದ ಮಹಾಸಭೆ



ಶ್ರೀ ಶಂಕರ ಪ್ರತಿಷ್ಠಾನ (ರಿ.) ಕಾರ್ಕಳ ಇದರ 2017–18ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 29–07–2018ನೇ ಆದಿತ್ಯವಾರ ಕಾರ್ಕಳದ ಶ್ರೀ ವಿಶ್ವೇಶ್ವರ ವೇಣುಗೋಪಾಲಕೃಷ್ಣ ದೇವಸ್ಥಾನದ ಕೃಷ್ಣಕೃಪಾ ಸಭಾಭವನದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾಗಿರುವ ಶ್ರೀ ರತ್ನಾಕರ ರಾವ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿ ಮಂಗಳೂರಿನ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಕೇದಗೆ ಹಾಗೂ ಬೆಳ್ಳಂಗಡಿಯ ಪ್ರಖ್ಯಾತ ವಕೀಲರಾದ ಶ್ರೀ ಬಿ.ಕೆ. ಧನಂಜಯ ಕುಮಾರ್ ಇವರುಗಳು ಭಾಗವಹಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಪ್ರತಿಷ್ಠಾನದ ಸದಸ್ಯರು ಮತ್ತು ಮಕ್ಕಳಿಂದ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು. ಶ್ರೀಮತಿ ಸೌಮ್ಯಾ ಭವಾನಿಶಂಕರ ರಾವ್ ಇವರು ಮನೋರಂಜನಾ ಕಾರ್ಯಕ್ರಮವನ್ನು ನಿರ್ವಹಿಸಿದರು. ಪೂರ್ವಾಹ್ನ ಗಂಟೆ 11ಕ್ಕೆ ಸರಿಯಾಗಿ ಅತಿಥಿಗಳಿಂದ ದೀಪ ಪ್ರಜ್ವಲನೆ ಮೂಲಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಸೌಮ್ಯಾ ಭವಾನಿಶಂಕರ ರಾವ್ ಮತ್ತು ಶ್ರೀಮತಿ ಮಲ್ಲಿಕಾ ಯಸ್. ಹೆಬ್ಬಾರ್ ಇವರು ಪ್ರಾರ್ಥಿಸಿದರು. ವರದಿ ವರ್ಷದಲ್ಲಿ ನಮ್ಮನ್ನಗಲಿದ ಸಮಾಜದ ಗಣ್ಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪ್ರತಿಷ್ಠಾನದ ಉಪಾಧ್ಯಕ್ಷರಾಗಿರುವ ಶ್ರೀಮತಿ ಮಲ್ಲಿಕಾ ಯಸ್. ಹೆಬ್ಬಾರ್ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿಯಾಗಿರುವ ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು ಇವರು ಗತವರ್ಷದ ಚಟುವಟಿಕೆಗಳ ವರದಿಯನ್ನು ಸಭೆಯ ಮುಂದಿಟ್ಟರು. ಕೋಶಾಧ್ಯಕ್ಷರಾಗಿರುವ ಶ್ರೀ ಹರೀಶ್ಚಂದ್ರರಾವ್ ಕರ್ವಾಲು ಇವರು ವರದಿ ವರ್ಷದ ಆಯವ್ಯಯವನ್ನು ಮಂಡಿಸಿ ಅಂಗೀಕಾರ ಪಡೆದರು. ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ಗಳನ್ನು ವಿತರಿಸಲಾಯಿತು. ಶ್ರೀಮತಿ ವಸಂತಿ ದಾಮೋದರ ರಾವ್ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ರಸಾಯನಶಾಸ್ತ್ರ ವಿಷಯದಲ್ಲಿ ಅತ್ಯಧಿಕ ಅಂಕ ಗಳಿಸಿದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗೆ ದಿ| ಕೆ. ಸೂರ್ಯನಾರಾಯಣ ರಾವ್ ಸ್ಮರಣಾರ್ಥ ವಿಶೇಷ ಬಹುಮಾನವನ್ನು ನೀಡಲಾಯಿತು. ಈ ಬಹುಮಾನವನ್ನು ಶ್ರೀಮತಿ ಇಂದಿರಾ ಯಸ್. ರಾವ್ ಇವರು ಪ್ರಾಯೋಜಿಸಿದರು. ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ದಿ| ಶ್ರೀಮತಿ ಜಾನಕಿ ಮತ್ತು ದಿ| ಶ್ರೀ ದೇವರಾವ್ ನಕ್ರೆ ಸ್ಮರಣಾರ್ಥ ವಿಶೇಷ ಬಹುಮಾನಗಳನ್ನು ನೀಡಲಾಯಿತು. ಅವರ ಪುತ್ರರಾದ ಶ್ರೀ ನಕ್ರೆ ಶಿವರಾವ್ ಇವರು ಆ ಬಹುಮಾನಗಳನ್ನು ಪ್ರಾಯೋಜಿಸಿದರು. ಗಣಿತ ವಿಷಯದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ದಿ| ಶ್ರೀ ಪುಂಡಲೀಕ ವರದ ರಾವ್ ಸ್ಮರಣಾರ್ಥ ವಿಶೇಷ ಬಹುಮಾನವನ್ನು ನೀಡಲಾಯಿತು. ಅವರ ಪುತ್ರಿಯಾದ ಶ್ರೀಮತಿ ಉಷಾ ರಾಜಶೇಖರ ಈ ಬಹುಮಾನವನ್ನು ಪ್ರಾಯೋಜಿಸಿದರು. ನಂತರ ದಿನಾಂಕ 22.07.2018ರಂದು ಸಮಾಜ ಬಾಂಧವರಿಗಾಗಿ ನಡೆಸಿದ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಪ್ರಾಯೋಜಕರಾದ ಶ್ರೀಮತಿ ಸಾವಿತ್ರಿ ಮನೋಹರ ರಾವ್‌ರವರು ವಿತರಿಸಿದರು. ಶ್ರೀಮತಿ ಕಾವ್ಯಾ ರವಿಪ್ರಕಾಶ್ ಇವರು ವಿಜೇತರಾದವರ ಪಟ್ಟಿಯನ್ನು ವಾಚಿಸಿದರು.

2017ನೇ ಇಸವಿಯ ಶಿಕ್ಷಕರ ದಿನಾಚರಣೆಯಂದು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಸ್ವೀಕರಿಸಿದ ಶಿಕ್ಷಕಿ ಶ್ರೀಮತಿ ಉಷಾ ರಾಜಶೇಖರ್, ತಾಲೂಕು ಮುಖ್ಯ ಶಿಕ್ಷಕರ ಸಂಘದ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಶಿಕ್ಷಕ ಶ್ರೀ ಹರೀಶ್ಚಂದ್ರ ರಾವ್ ಕರ್ವಾಲು ಹಾಗೂ ರಾಷ್ಟ್ರೀಯ ಕ್ರೀಡಾಪಟು ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ಶಶಿಕಲಾ ಸತೀಶ್ ರಾವ್ ಕರ್ವಾಲು ಇವರುಗಳನ್ನು ಅತಿಥಿಗಳು ಶಾಲು ಹೊದಿಸಿ, ಫಲಪುಷ್ಪ, ಸ್ಮರಣಿಕೆಗಳನ್ನಿತ್ತು ಸನ್ಮಾನಿಸಿದರು. ಶ್ರೀಮತಿ ಶೈಲಜಾ ರತ್ನಾಕರ ರಾವ್, ಶ್ರೀಮತಿ ಪದ್ಮಿನಿ ಅನಿಲ್ ಕುಮಾರ್ ಮತ್ತು ಶ್ರೀಮತಿ ವತ್ಸಲಾ ಶ್ಯಾನುಭಾಗ್ ಇವರುಗಳು ಸನ್ಮಾನಪತ್ರ ಗಳನ್ನು ವಾಚಿಸಿದರು. ನಮ್ಮ ಸಮಾಜಕ್ಕೆ ವಿಶಿಷ್ಟವಾಗಿ ಸೇವೆಗೈದಿರುವ ಕಬ್ಬಿನಾಲೆಯ ಶ್ರೀಮತಿ ಸತ್ಯಮ್ಮ ಮತ್ತು ಶ್ರೀ ಪದ್ಮನಾಭ ಹೆಬ್ಬಾರ್ ಇವರುಗಳನ್ನು ಅವರ ಅನುಪಸ್ಥಿತಿಯ ಕಾರಣ ಮುಂದಿನ ದಿನಗಳಲ್ಲಿ ಅವರ ನಿವಾಸಕ್ಕೇ ತೆರಳಿ ಸನ್ಮಾನಿಸುವುದೆಂದು ತೀರ್ಮಾನಿಸಿ ಅವರ ಸನ್ಮಾನ ಪತ್ರವನ್ನು ಸಭೆಯ ಅವಗಾಹನೆಗಾಗಿ ವಾಚಿಸಲಾಯಿತು.

ಬಳಿಕ ಮಾತನಾಡಿದ ಮುಖ್ಯ ಅತಿಥಿಗಳಾದ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಕೇದಗೆ ಇವರು ಇಂದಿನ ಸಮಾಜ ಎದುರಿಸುತ್ತಿರುವ ಸಾಮಾಜಿಕ ಸವಾಲುಗಳನ್ನು ಎದುರಿಸುವಲ್ಲಿ ಮಹಿಳೆಯರ ಪ್ರಾಮುಖ್ಯತೆ ಬಗ್ಗೆ ತಿಳಿಸಿದರು. ನಂತರ ಮಾತನಾಡಿದ ಶ್ರೀ ಧನಂಜಯ ಕುಮಾರ್ ರವರು ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನದ ನಾಗಾಲೋಟದ ಪ್ರಭಾವದಿಂದ ಇಂದಿನ ಯುವಜನಾಂಗ ವಾಸ್ತವದಲ್ಲಿ ಬದುಕದೇ ಕಲ್ಪನಾಲೋಕದಲ್ಲಿ ಬದುಕುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು. ವಿದ್ಯಾನಿಧಿಗೆ ರೂ.1,00,000/– ಸಹಾಯಧನ ನೀಡಿದ ಶ್ರೀ ಕಾಂತಾವರ ಪ್ರಭಾಕರ ರಾಯರಿಗೆ ಅವರ ಅನುಪಸ್ಥಿತಿಯಲ್ಲಿ ಧನ್ಯವಾದ ಸಮರ್ಪಿಸ ಲಾಯಿತು. ದಿ| ವೈ.ಸೀತಮ್ಮ ಪದ್ಮನಾಭ ಶರ್ಮ ದತ್ತಿನಿಧಿಯನ್ನು ಸ್ಥಾಪಿಸಿದ ಅವರ ಕುಟುಂಬಿಕರ ಪರವಾಗಿ ಶ್ರೀಮತಿ ರಾಜೇಶ್ವರಿಯವರನ್ನು ಶಾಲು ಹೊದಿಸಿ ಗೌರವಿಸಲಾಯಿತು.

ಐ. ಕೆ. ಭಾರತಿಯವರು ಧನ್ಯವಾದ ಸಮರ್ಪಣೆ ಮಾಡಿದರು. ಶ್ರೀಯುತ ಸದಾಶಿವ ರಾವ್ ತೆಳ್ಳಾರು ಇವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ನಂತರ ಮಧ್ಯಾಹ್ನ ಭೋಜನದೊಂದಿಗೆ ಸಮಾರಂಭವು ಮುಕ್ತಾಯವಾಯಿತು.




*With Best Compliments from :*

**Dr. Sanath S. Rao**

M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)


## ಬೆಳ್ತಂಗಡಿ ಸಂಘದ ಮಹಾಸಭೆ



ದಿನಾಂಕ 22–07–2018ರಂದು ಬೆಳ್ತಂಗಡಿಯ ಲ್ಯಾಲದಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ 21ನೇ ವರ್ಷದ ವಾರ್ಷಿಕೋತ್ಸವ ಮತ್ತು ಮಹಾಸಭೆಯು ಜರುಗಿತು. ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಬಿ.ಕೆ.ಧನಂಜಯ ರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆರೋಗ್ಯ ಕ್ಲಿನಿಕ್ ನಾವೂರು ಇದರ ವೈದ್ಯರಾದ ಡಾ|| ಪ್ರದೀಪ್‌ರವರು ವಹಿಸಿದ್ದರು. ಮುಖ್ಯ ಅತಿಥಿ ಸ್ಥಾನದಿಂದ ಡಾ|| ಪ್ರದೀಪ್‌ರವರು ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾದ ಚಟುವಟಿಕೆಗಳನ್ನು ಶ್ಲಾಘಿಸುತ್ತ ಮೆಚ್ಚುಗೆಯ ಮಾತುಗಳನ್ನಾಡಿದರು. ಬದುಕಿನ ಗುರಿಯನ್ನು ತಲುಪುವ ತನಕ ಛಲವನ್ನು ಬಿಡದೆ ನಿರಂತರ ಶ್ರಮಿವಂತೆ ಯುವಕರಿಗೆ ಕರೆ ನೀಡಿದರು. ಕಾರ್ಯಕ್ರಮ ದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಸುಮಾರು 30 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನವನ್ನು ಮಾಡಲಾಯಿತು. ಸ್ಥಾನಿಕ ಬ್ರಾಹ್ಮಣ ಸಮಾಜದ 22 ವಿದ್ಯಾರ್ಥಿಗಳಿಗೆ ಸುಮಾರು ರೂ.1,05,000/– ಪ್ರೋತ್ಸಾಹ ಧನವನ್ನು ವಿತರಿಸಲಾಯಿತು. ಕಾರ್ಯಕ್ರಮಕ್ಕೆ ಸುಮಾರು 300 ವಿಪ್ರ ಬಾಂಧವರು ಸಾಕ್ಷಿಗಳಾದರು. ಸಂಘದ ಕಾರ್ಯದರ್ಶಿ ದಿನೇಶ್ ಕುಮಾರ್ ಎಂ.ಎಸ್. ರವರು ಸಂಘದ ಒಂದು ವರ್ಷದ ಕಾರ್ಯಕ್ರಮದ ವರದಿಯನ್ನು ಸಭೆಗೆ ನೀಡಿದರು. ವಾರ್ಷಿಕ ವರದಿ ಪುಸ್ತಕದ ಬಿಡುಗಡೆಯನ್ನು ಮುಖ್ಯ ಅತಿಥಿಗಳು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಬಿ.ಕೆ.ಧನಂಜಯ ರಾವ್ ಅಧ್ಯಕ್ಷೀಯ ಅವಧಿಯಲ್ಲಿ ಸಹಕರಿಸಿದ ಸರ್ವರಿಗೆ ಅಭಿವಂದಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ರೇಖಾ ಸುಧೀರ್ ರಾವ್, ಯುವ ವೇದಿಕೆಯ ಅಧ್ಯಕ್ಷರಾದ ನಿತಿನ್ ರಾವ್ ಧರ್ಮಸ್ಥಳ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು. ಶ್ರೀಮತಿ ಸೀತಾಲಕ್ಷ್ಮೀ ದಿನೇಶ್ ಕುಮಾರ್ ಮತ್ತು ರೂಪ ಮಧುಸೂದನ್‌ರವರ ಪ್ರಾರ್ಥನೆ ಯೊಂದಿಗೆ ಕಾರ್ಯಕ್ರಮವು ಪ್ರಾರಂಭಗೊಂಡು ಪಿ.ಲಕ್ಷ್ಮೀನಾರಾಯಣ ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು. ಕಾರ್ಯಕ್ರಮದ ನಿರ್ವಹಣೆಯನ್ನು ಹರೀಶ್ ರಾವ್ ಧರ್ಮಸ್ಥಳ ಹಾಗೂ ಲತಾ ಅರುಣ್ ಕುಮಾರ್ ನೆರವೇರಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷ ರಾದ ರಘುಚಂದ್ರ ರಾವ್, ಮಹಿಳಾ ವೇದಿಕೆಯ ಕಾರ್ಯದರ್ಶಿಯಾದ ರಾಜಶ್ರೀ ಧನಂಜಯ ರಾವ್, ಯುವ ವೇದಿಕೆಯ ಕಾರ್ಯದರ್ಶಿ ಹರೀಶ್ ರಾವ್, ಕಟ್ಟಡ ಸಮಿತಿಯ ಅಧ್ಯಕ್ಷರಾದ ಎಂ.ಎಸ್. ಅರುಣ್ ಕುಮಾರ್‌ರವರು ಉಪಸ್ಥಿತರಿದ್ದರು.

ನಂತರ ನಡೆದ ಮಹಾಸಭೆಯಲ್ಲಿ 2018–20ನೇ ಸಾಲಿನ ಸುಬ್ರಹ್ಮಣ್ಯ ಸಭಾದ ನೂತನ ನಿರ್ದೇಶಕರ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ನಿರ್ದೇಶಕರ ಮಂಡಳಿಯಲ್ಲಿ ದಿನೇಶ್ ಕುಮಾರ್ ಎಂ.ಎಸ್.ರವರನ್ನು ಅಧ್ಯಕ್ಷರನ್ನಾಗಿಯೂ, ವಸಂತ ಭಟ್ ನಾರಾವಿ ಹಾಗೂ ವಿಶ್ವಜಿತ್ ರಾವ್ ಕನ್ಯಾಡಿ ಇವರುಗಳನ್ನು ಉಪಾಧ್ಯಕ್ಷರುಗಳನ್ನಾಗಿಯೂ, ಪಿ.ಲಕ್ಷ್ಮೀನಾರಾಯಣ ರಾವ್ ಧರ್ಮಸ್ಥಳ ರವರನ್ನು ಕಾರ್ಯದರ್ಶಿಯನ್ನಾಗಿಯೂ, ರೇಖಾ ಸುಧೀರ್ ರಾವ್‌ರವರನ್ನು ಕೋಶಾಧಿಕಾರಿಯನ್ನಾಗಿಯೂ, ಜಯಪ್ರಕಾಶ್ ರಾವ್‌ರವರನ್ನು ಜೊತೆ ಕಾರ್ಯದರ್ಶಿ ಯನ್ನಾಗಿಯೂ ಆಯ್ಕೆ ಮಾಡಲಾಯಿತು. ಶ್ರೀಮತಿ ಶಾಂತಾ ಸುರೇಶ್‌ರವರನ್ನು ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾಗಿ, ಶ್ರೀಮತಿ ಸುಮಂಗಲಾ ಪ್ರಶಾಂತ್‌ರವರನ್ನು ಮಹಿಳಾ ವೇದಿಕೆಯ ಅಧ್ಯಕ್ಷೆಯನ್ನಾಗಿ, ಶ್ರೀಮತಿ ರೂಪಾ ಮಧುಸೂದನ್‌ರವರನ್ನು ಮಹಿಳಾ ವೇದಿಕೆಯ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡ ಲಾಯಿತು. ಜಯಚಂದ್ರ ರಾವ್ ಧರ್ಮಸ್ಥಳ ಇವರನ್ನು ಯುವ ವೇದಿಕೆಯ ಅಧ್ಯಕ್ಷರನ್ನಾಗಿ ಹಾಗೂ ಮಿಥುನ್ ರಾವ್ ಧರ್ಮಸ್ಥಳ ಇವರನ್ನು ಯುವ ವೇದಿಕೆಯ ಕಾರ್ಯದರ್ಶಿ ಯನ್ನಾಗಿ ಆರಿಸಲಾಯಿತು.

ಭೋಜನದ ನಂತರ ರಜತ್ ಮಯ್ಯ ಉಜಿರೆ ಇವರ ಸಾರಥ್ಯದಲ್ಲಿ ಯುವ ತರಂಗ ತಂಡದಿಂದ ಸಂಗೀತ ನೃತ್ಯಗಳ ಸಮಾಗಮ ಕಾರ್ಯಕ್ರಮ ಸುಂದರವಾಗಿ ಮೂಡಿ ಬಂತು.



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಿನಲ್ಲಿ ಈ ವರ್ಷದ ಆಟಿತೊ ಆಟ ಕೂಟದ ಸಂದರ್ಭ...

## ನಾಲ್ಕನೇ ವರುಷದ ಸ್ವಚ್ಛತಾ ಕಾರ್ಯಕ್ರಮ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಯುವವೇದಿಕೆಯವರು ಆರಂಭಿಸಿದ ಸ್ವಚ್ಛತಾ ಕಾರ್ಯಕ್ರಮ ಇದೀಗ ನಾಲ್ಕನೇ ವರುಷಕ್ಕೆ ಕಾಲಿಟ್ಟಿತು. ಜೂನ್–ಜುಲೈ ತಿಂಗಳ ಜಡಿಮಳೆ ಮುಗಿದು ನಾಗರ ಪಂಚಮಿ ಹಬ್ಬ ಹತ್ತಿರ ಬಂದಂತೆ ಶ್ರೀ ಶಾರದಾ ಮಂಟಪದ ವಠಾರದ ಕಸಕಡ್ಡಿಗಳನ್ನು ತೆಗೆದು ಶುಚಿಗೊಳಿಸುವ ಕಾರ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಸ್ವಚ್ಛತಾ ಆಂದೋಲನಕ್ಕೆ ಕರೆಕೊಟ್ಟ ವರ್ಷದಿಂದಲೇ ಆರಂಭಗೊಂಡಿದ್ದು ಈ ವರ್ಷವೂ ಉತ್ಸಾಹಿ ಕಾರ್ಯಕರ್ತರ ಭಾಗವಹಿಸುವಿಕೆಯಿಂದ ದಿನಾಂಕ 05.08.2018ರ ರವಿವಾರದಂದು ಯಶಸ್ವಿಯಾಗಿ ನೆರವೇರಿತು. ಸ್ವಚ್ಛತೆಯ ಬಗ್ಗೆ ಜನರಿಗೆ ಮೂಡಿರುವ ಅರಿವಿನಿಂದಲೋ ಅಥವಾ ಪ್ರತಿ ವರ್ಷವೂ ಚಾಚೂ ತಪ್ಪದೆ ನಡೆಸಿಕೊಂಡು ಬಂದಿದ್ದರಿಂದಲೋ ತಿಳಿಯದು, ಈ ಬಾರಿ ಕಸದ ಹೊರೆ ಕಡಿಮೆ ಇತ್ತು. ಆದರೆ ಭಾಗವಹಿಸಿದ ಕಾರ್ಯಕರ್ತರ ಸಂಖ್ಯೆ ಹೆಚ್ಚಿತ್ತು. ನಾಗದೇವರ ಗುಡಿ, ಶ್ರೀ ಶಾರದಾ ದೇವಸ್ಥಾನ, ಜ್ಞಾನಮಂದಿರಗಳ ಸುತ್ತ ಇದ್ದ ಪಾಚಿ ಕೊಳೆ ತೊಳೆದು ಮಾಡಿನ ಮೇಲಿದ್ದ ಕಸವನ್ನು ಎತ್ತಿಹಾಕಿ, ಸಾಗಿಸಿ ಸುಣ್ಣ ಸಾರಿಸಿ ಸ್ವಚ್ಛ ಮಾಡಲಾಯಿತು. ಯುವವೇದಿಕೆಯ ಸಂಚಾಲಕರಾದ ಶ್ರೀ ಕರಂಬಳ್ಳಿ ವಸಂತ ರಾವ್, ಅಧ್ಯಕ್ಷರಾದ ಶ್ರೀ ಕೃಷ್ಣರಾಜ ರಾವ್, ಸಂಘದ ಅಧ್ಯಕ್ಷರಾದ ಶ್ರೀ ವೈ ಭುವನೇಂದ್ರ ರಾವ್, ಕಾರ್ಯದರ್ಶಿ ಶ್ರೀ ಕೆ ಸುರೇಶ್ ರಾವ್, ಕೋಶಾಧಿಕಾರಿ ಶ್ರೀ ಕೆ ಸುಧಾಕರ ರಾವ್ ಹಾಗೂ ಇತರರು ಹಾಜರಿದ್ದು ಕಾರ್ಯಕರ್ತರನ್ನು ಹುರಿದುಂಬಿಸಿದರು.

## ನಿವೃತ್ತ ಗಡಿಪಡೆಯ ಯೋಧ ಶ್ರೀ ಕೆ. ಸುರೇಶ್ ರಾಯರಿಗೆ ಸನ್ಮಾನ



ನಮ್ಮ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ. ಸುರೇಶ್ ರಾಯರನ್ನು ಉದ್ಯಾವರ ವಲಯ ಬ್ರಾಹ್ಮಣ ಪರಿಷತ್ತಿನ ಬೆಳ್ಳಿಹಬ್ಬದ ಆಚರಣೆಯ ಸಂದರ್ಭದಲ್ಲಿ ದೇಶಕ್ಕಾಗಿ ಸಲ್ಲಿಸಿದ ಗುರುತರ ಸೇವೆಯನ್ನು ಪರಿಗಣಿಸಿ ನಿವೃತ್ತ ಗಡಿಭದ್ರತಾ ಪಡೆಯ ಯೋಧನೆಂದು ಗುರುತಿಸಿ ಸನ್ಮಾನಿಸಲಾಯಿತು.





With Best Compliments From :




With Best Compliments From :





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org